ಕರ್ನಾಟಕ ಸರ್ಕಾರ

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965
# ಮತ್ತು
# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965
# ಮತ್ತು
# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಕ್ರಮಾಂಕ : ಲಾ 7 ಎಲ್ಎಂಪಿ 90, ದಿನಾಂಕ: 16ನೇ ಏಪ್ರಿಲ್ 1990**

**ಅಧಿಸೂಚನೆ**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26)ರ 5ಕ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಎಸ್. ಮೋಹನ್ ಎಂಬ ನಾನು, ಕರ್ನಾಟಕ ಕಾರ್ಮಿಕ ಕಲ್ಯಾಣನಿಧಿ ಅಧಿನಿಯಮ, 1965 ಮತ್ತು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968 ಇದರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

ಸಹಿ/–
ಎಸ್. ಮೋಹನ್
ಕರ್ನಾಟಕ ರಾಜ್ಯಪಾಲರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ,**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.
(ಪ್ರಕಟಣೆಗಳು).

| ಕ್ರಮ ಸಂಖ್ಯೆ | ವಿಷಯ |
|---|---|
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ |
| 2. | ಪರಿಭಾಷೆ |
| 3. | ಕಲ್ಯಾಣ ನಿಧಿ |
| 4. | ಮಂಡಲಿ |
| 5. | ಅನರ್ಹತೆಗಳು ಮತ್ತು ತೆಗೆದು ಹಾಕುವುದು |
| 6. | ಸದಸ್ಯನಿಂದ ಪದಕ್ಕೆ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು |
| 7. | ಸಂದಾಯ ಮಾಡಿಲ್ಲದ ಸಂಚಯಗಳು ಮತ್ತು ಅವುಗಳ ಬಗ್ಗೆ ಕ್ಲೇಮುಗಳು |
| 7–ಕ. | ವಂತಿಗೆ |
| 7–ಖ. | ತಗಾದೆ ನೋಟೀಸಿನ ತರುವಾಯ ಸಂದಾಯ ಮಾಡಿಲ್ಲದ ಸಂಚಯ ಅಥವಾ ಜುಲ್ಮಾನೆಗಳ ಮೇಲಣ ಬಡ್ಡಿ |
| 8. | ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ |
| 9. | ಸಾಲ ಪಡೆಯಲು ಮಂಡಲಿಯ ಅಧಿಕಾರ |
| 10. | ನಿಧಿಯ ಹೂಡಿಕೆ |
| 11. | ಮಂಡಲಿಗೆ ರಾಜ್ಯ ಸರ್ಕಾರದಿಂದ ನಿರ್ದೇಶನ |
| 12. | ವೆಲ್‌ಫೇರ್ ಕಮೀಷನರರ ನೇಮಕಾತಿ ಮತ್ತು ಅಧಿಕಾರಗಳು |
| 13. | ಪರಿಶೀಲಕರ ನೇಮಕಾತಿ |
| 14. | ಮಂಡಲಿಯಿಂದ ಲಿಪಿಕ ಮತ್ತು ಇತರ ಸಿಬ್ಬಂದಿಯ ನೇಮಕಾತಿ |
| 15. | ಮಂಡಲಿಯ ಸಿಬ್ಬಂದಿಗೆ ಸೇರಿದ ಯಾವನೇ ವ್ಯಕ್ತಿಯನ್ನು ತೆಗೆದು ಹಾಕಲು ರಾಜ್ಯ ಸರ್ಕಾರದ ಅಧಿಕಾರ |
| 16. | ದಾಖಲೆಗಳು ಇತ್ಯಾದಿಗಳನ್ನು ತರಿಸಿಕೊಳ್ಳಲು ರಾಜ್ಯ ಸರ್ಕಾರ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯ ಅಧಿಕಾರ |
| 17. | ನಿಧಿಗೆ ಸಂದಾಯ ಮಾಡಬೇಕಾದ ಮೊತ್ತಗಳ ವಸೂಲಿಯ ವಿಧಾನ ಇತ್ಯಾದಿ |

| ಕ್ರಮ ಸಂಖ್ಯೆ | ವಿಷಯ |
|---|---|
| 17–ಕ. | ಪರಿಶೀಲಕನು ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಡ್ಡಿಯನ್ನುಂಟು ಮಾಡಿದ್ದಕ್ಕಾಗಿ ಅಥವಾ ದಸ್ತಾವೇಜುಗಳು ಇತ್ಯಾದಿಗಳನ್ನು ಹಾಜರುಪಡಿಸಲು ತಪ್ಪುವುದಕ್ಕಾಗಿ ದಂಡನೆ |
| 17–ಖ. | ಅಧಿನಿಯಮದ ಯಾವುದೇ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ |
| 17–ಗ. | ಅಪರಾಧಗಳ ಸಂಜ್ಞೇಯತೆ |
| 18. | ಮಂಡಲಿಯನ್ನು ರದ್ದುಗೊಳಿಸುವುದು |
| 19. | ನಿಯಮಗಳು |
| 20. | ಮಂಡಲಿಯ ಸದಸ್ಯರು, ವೆಲ್‌ಫೇರ್ ಕಮೀಷನರನು, ಪರಿಶೀಲಕರು ಮತ್ತು ಮಂಡಲಿಯ ಎಲ್ಲ ಅಧಿಕಾರಿಗಳು ಹಾಗೂ ನೌಕರರು ಲೋಕ ನೌಕರರಾಗಿರತಕ್ಕದ್ದು |
| 21. | ಸದ್ಭಾವನೆಯಿಂದ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ಸಂರಕ್ಷಣೆ |
| 22. | ವಿನಾಯಿತಿ |
| 23. | ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದ್ದು |
| 24. | ಸರ್ಕಾರಿ ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಮಂಡಲಿಗೆ ವರ್ಗಾಯಿಸಬಹುದು |
| 25. | ಕೇಂದ್ರಾಧಿನಿಯಮ, 1936ರ 4ರ 8ನೇ ಪ್ರಕರಣದ ತಿದ್ದುಪಡಿ |
| 26. | ನಿರಸನ ಮತ್ತು ಉಳಿಸುವಿಕೆಗಳು |

## ಕರ್ನಾಟಕ ಅಧಿನಿಯಮ, 1965ರ ಸಂಖ್ಯೆ 15

(1965ರ ಆಗಸ್ಟ್ ಐದನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965

(1965ರ ಜುಲೈ ಎಂಟನೇ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಕಲ್ಯಾಣವನ್ನು ಸಂವರ್ಧನಗೊಳಿಸುವುದಕ್ಕೆ ಹಣಕಾಸು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಒಂದು ನಿಧಿಯನ್ನು ರಚಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕ ಕಲ್ಯಾಣವನ್ನು ಸಂವರ್ಧನೆಗೊಳಿಸುವುದಕ್ಕಾಗಿ ಹಣಕಾಸು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ನಿಧಿಯನ್ನು ರಚಿಸುವುದು ವಿಹಿತವಾಗಿರುವುದರಿಂದ ;

ಭಾರತ ಗಣರಾಜ್ಯದ ಹದಿನಾರನೇಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965 ಎಂದು ಕರೆಯತಕ್ಕದ್ದು:–

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ರಾಜ್ಯದ ಬೇರೆ ಬೇರೆ ಪ್ರದೇಶಕ್ಕಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆ:–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ಮಂಡಲಿ"** ಎಂದರೆ 4ನೇ ಪ್ರಕರಣದ ಮೇರೆಗೆ ರಚಿಸಲಾದ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಲಿ;

(1ಕ) **"ವಂತಿಗೆ"** ಎಂದರೆ 7ಕ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮಂಡಲಿಗೆ ಸಂದಾಯವಾಗ ಬೇಕಾದ ನಿಯೋಜಕನ ವಂತಿಗೆ, ನಿಯೋಜಿತರವಂತಿಗೆ ಮತ್ತು ರಾಜ್ಯ ಸರ್ಕಾರದ ವಂತಿಗೆಯನ್ನು ಒಳಗೊಂಡಿರುವ ಹಣದ ಮೊತ್ತ;

(2) **"ನಿಯೋಜಿತ"** ಎಂದರೆ ಒಂದು ಕಾರ್ಯ ಸಂಸ್ಥೆಯಲ್ಲಿ ಯಾವುದೇ ಕುಶಲ ಅಥವಾ ಕುಶಲವಲ್ಲದ ದೈಹಿಕ ಅಥವಾ ಲಿಪಿಕ ಕೆಲಸವನ್ನು ಮಾಡಲು ಮಜೂರಿಯ ಮೇಲೆ ನಿಯೋಜಿತನಾದ ಯಾವನೇ ವ್ಯಕ್ತಿ;

(3) **"ನಿಯೋಜಕ"** ಎಂದರೆ ಒಂದು ಕಾರ್ಯ ಸಂಸ್ಥೆಯಲ್ಲಿ ಒಬ್ಬ ಅಥವಾ ಅದಕ್ಕಿಂತ ಹೆಚ್ಚು ನಿಯೋಜಿತರನ್ನು ಅವನ ಅಥವಾ ಇತರ ಯಾವನೇ ವ್ಯಕ್ತಿಯ ಪರವಾಗಿಯಾಗಲೀ, ನೇರವಾಗಿಯಾಗಲೀ ಅಥವಾ ಇನ್ನೊಬ್ಬ ವ್ಯಕ್ತಿಯ ಮೂಲಕವಾಗಲೀ ನಿಯೋಜಿಸಿಕೊಳ್ಳುವ ಯಾವನೇ ವ್ಯಕ್ತಿ ಮತ್ತು ಇದು ;

(i) ಕಾರ್ಖಾನೆಯಲ್ಲಿ ವ್ಯವಸ್ಥಾಪಕನೆಂದು ಕಾರ್ಖಾನೆಗಳ ಅಧಿನಿಯಮ, 1948ರ (7) (1)(ಚ) ಪ್ರಕರಣದ ಮೇರೆಗೆ ಹೆಸರಿಸಿದ ಯಾವನೇ ವ್ಯಕ್ತಿ;

(ii) ಯಾವುದೇ ಕಾರ್ಯ ಸಂಸ್ಥೆಯಲ್ಲಿ ನಿಯೋಜಿತರ ಮೇಲೆ ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ಅಥವಾ ಮಜೂರಿಗಳನ್ನು ಸಂದಾಯ ಮಾಡುವುದಕ್ಕಾಗಿ ಒಡೆಯನಿಗೆ ಜವಾಬ್ದಾರನಾಗಿರುವ ಯಾವನೇ ವ್ಯಕ್ತಿ

– ಇವರನ್ನು ಒಳಗೊಳ್ಳುತ್ತದೆ.

(4) "ಕಾರ್ಯ ಸಂಸ್ಥೆ" ಎಂದರೆ;–

(i) ಒಂದು ಕಾರ್ಖಾನೆ;

(ii) ಮೋಟಾರ್ ದೊಡ್ಡ ಬಾಡಿಗೆ ಬಸ್ ಸೇವೆ;

(iii) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ, ನೋಂದಾಯಿತವಾದ ಅಥವಾ ನೋಂದಾಯಿಸಲಾಗಿದೆ ಎಂದು ಭಾವಿಸಲಾದ ಸಂಘ ಮತ್ತು ಧರ್ಮಾರ್ಥ ಅಥವಾ ಇತರ ನ್ಯಾಸಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಸಹಾಯಕವಾದ ಯಾವುದೇ ವ್ಯವಹಾರ ಅಥವಾ ವ್ಯಾಪಾರ ಅಥವಾ ಯಾವುದೇ ಕೆಲಸವನ್ನು ನಡೆಸುತ್ತಿರುವಂಥ ಮತ್ತು ಐವತ್ತಕ್ಕಿಂತ ಹೆಚ್ಚಿನ ವ್ಯಕ್ತಿಗಳನ್ನು ನಿಯೋಜಿಸಿಕೊಂಡಿರುವಂಥ ಅಥವಾ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಯಾವುದೇ ಕೆಲಸದ ದಿವಸದಂದು ಅವರನ್ನು ನಿಯೋಜಿಸಿ ಕೊಂಡಿದ್ದಂಥ ಅದಕ್ಕೆ ಅನ್ವಯವಾಗುವ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತವಾಗಿರಲಿ ಅಥವಾ ಇಲ್ಲದಿರಲಿ ಆ ಧರ್ಮಾರ್ಥ ಅಥವಾ ಇತರ ನ್ಯಾಸವನ್ನು ಒಳಗೊಂಡ ಯಾವುದೇ ಕಾರ್ಯ ಸಂಸ್ಥೆ;

ಆದರೆ ಇದು, ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರದ (ಕಾರ್ಖಾನೆಯಾಗಿಲ್ಲದ) ಕಾರ್ಯ ಸಂಸ್ಥೆಯನ್ನು ಒಳಗೊಳ್ಳುವುದಿಲ್ಲ ಮತ್ತು;

(IV) ಯಾವುದೇ ನೆಡುತೋಪು ಅಥವಾ ಕಾರ್ಯಾಗಾರಗಳು;

(5) "ಕಾರ್ಖಾನೆ" ಎಂದರೆ ಕಾರ್ಖಾನೆಗಳ ಅಧಿನಿಯಮ, 1948ರ 2(ಡ) ಪ್ರಕರಣದಲ್ಲಿ ಪರಿಭಾಷಿಸಿದಂತೆ ಕಾರ್ಖಾನೆ;

(6) "ನಿಧಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ;

(7) "ಸ್ವತಂತ್ರ ಸದಸ್ಯ" ಎಂದರೆ, ಯಾವುದೇ ಕಾರ್ಯಸಂಸ್ಥೆಯ ವ್ಯವಸ್ಥಾಪನೆಯೊಂದಿಗೆ ಸಂಬಂಧವಿಲ್ಲದ ಅಥವಾ ನಿಯೋಜಿತನಾಗಿರುವ ಮಂಡಲಿಯ ಸದಸ್ಯ ಮತ್ತು ಇದು ಸದಸ್ಯನಾಗಿ ನಾಮನಿರ್ದೇಶಿತನಾದ ಸರ್ಕಾರದ ಅಧಿಕಾರಿಗಳನ್ನು ಒಳಗೊಳ್ಳುತ್ತದೆ;

(8) "ಪರಿಶೀಲಕ" ಎಂದರೆ 1ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪರಿಶೀಲಕ;

(9) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(10) "ಸಂದಾಯ ಮಾಡಿಲ್ಲದ ಸಂಚಯಗಳು" ಎಂದರೆ ನಿಯೋಜಕನು ಕಾನೂನು ಸಮ್ಮತವಾಗಿ ಸಂದಾಯ ಮಾಡಬೇಕಾದ ಮಜೂರಿಗಳು ಮತ್ತು ಉಪದಾನಗಳನ್ನು ಒಳಗೊಂಡು ಆದರೆ ನಿಯೋಜಿತರ ಭವಿಷ್ಯ ನಿಧಿಗಳ ಅಧಿನಿಯಮ, 1952ರ ಮೇರೆಗೆ, ಸ್ಥಾಪಿಸಿದ ಭವಿಷ್ಯನಿಧಿಗೆ ನಿಯೋಜಕನು ಸಂದಾಯ ಮಾಡಿದ ವಂತಿಗೆಯ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಒಳಗೊಳ್ಳದ ಈ ಅಧಿನಿಯಮ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ಆ ತರುವಾಯವಾಗಲಿ ಅವು ಜಾರಿಯಾದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ನಿಯೋಜಿತರಿಗೆ ಬಾಕಿಯಾದ ಆದರೆ ಅವರಿಗೆ ಸಂದಾಯ ಮಾಡಿಲ್ಲದ ಎಲ್ಲಾ ಸಂದಾಯಗಳು;

(11) "ಮಜೂರಿಗಳು" ಎಂದರೆ ಯಾವುದು ವ್ಯಾಪ್ತವಾದ ಅಥವಾ ಇಂಗಿತವಾದ ನಿಯೋಜನೆಯ ಕರಾರಿನ ನಿಬಂಧನೆಗಳನ್ನು ಪೂರೈಸಿದರೆ ಅವನ ನಿಯೋಜನೆ ಅಥವಾ ಅಂಥ ನಿಯೋಜನೆಯಲ್ಲಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ನಿಯೋಜಿತನಾದ ವ್ಯಕ್ತಿಗೆ ಸಂದಾಯ ಮಾಡಬೇಕಾಗಿದೆಯೋ ಆ ಹಣದ ರೂಪದಲ್ಲಿ ವ್ಯಕ್ತಪಡಿಸಬಹುದಾದ ಎಲ್ಲ ಪರಿಶ್ರಮಧನ ; ಆದರೆ ಇದು:–

(ಕ) (1) ಯಾವುದೇ ವಸತಿ ಸ್ಥಳಾವಕಾಶ, ದೀಪ, ನೀರು ಸರಬರಾಜು, ವೈದ್ಯಕೀಯ ಚಿಕಿತ್ಸೆ; ಅಥವಾ

(ii) ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಹೊರತುಪಡಿಸಿದ ಇತರ ಯಾವುದೇ ಸೇವೆ–ಇವುಗಳ ಮೌಲ್ಯವನ್ನು ;

(ಖ) ಯಾವುದೇ ಪಿಂಚಣಿ ನಿಧಿಗೆ ಅಥವಾ ಭವಿಷ್ಯ ನಿಧಿಗೆ ಅಥವಾ ಸಾಮಾಜಿಕ ವಿಮೆಯ ಯಾವುದೇ ಯೋಜನೆಯ ಮೇರೆಗೆ ನಿಯೋಜಕನು ಸಂದಾಯ ಮಾಡಿದ ಯಾವುದೇ ವಂತಿಗೆಯನ್ನು ;

(ಗ) ಯಾವುದೇ ಪ್ರಯಾಣ ಭತ್ಯೆ ಅಥವಾ ಯಾವುದೇ ಪ್ರಯಾಣ ರಿಯಾಯಿತಿಯ ಮೌಲ್ಯವನ್ನು;

(ಘ) ನಿಯೋಜಿತನಾದ ವ್ಯಕ್ತಿಗೆ ಅವನ ನಿಯೋಜನೆಯ ಸ್ವರೂಪದಿಂದಾಗಿ ತಗಲುವ ವಿಶೇಷ ವೆಚ್ಚಗಳನ್ನು ಭರಿಸುವ ಸಲುವಾಗಿ ಸಂದಾಯ ಮಾಡಿದ ಯಾವುದೇ ಮೊತ್ತ; ಅಥವಾ

(ಙ) ಸೇವೆಯಿಂದ ಬಿಡುಗಡೆಯಾದ ಮೇಲೆ ಸಂದಾಯ ಮಾಡಬೇಕಾದ ಯಾವುದೇ ಉಪದಾನವನ್ನು ;

–ಒಳಗೊಳ್ಳುವುದಿಲ್ಲ.

(12) **"ವೆಲ್‌ಫೇರ್ ಕಮೀಷನರ್"** ಎಂದರೆ 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ವೆಲ್‌ಫೇರ್ ಕಮೀಷನರ್;

**3. ಕಲ್ಯಾಣ ನಿಧಿ :–**(1) ರಾಜ್ಯ ಸರ್ಕಾರವು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ರಚಿಸತಕ್ಕದ್ದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಅಥವಾ ಲಿಖಿತದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಂದಾಯ ಮಾಡಿಲ್ಲದ ಎಲ್ಲ ಸಂಚಯಗಳನ್ನು ಮಂಡಲಿಗೆ ಸಂದಾಯ ಮಾಡತಕ್ಕದ್ದು. ಅದು, ಅದಕ್ಕೆ ಸಂಬಂಧಿಸಿದ ಕ್ಲೇಮುಗಳು 7ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಅದಕ್ಕಾಗಿನ ಕ್ಲೇಮುಗಳನ್ನು ತೀರ್ಮಾನಿಸುವವರೆಗೆ, ಅದಕ್ಕಾಗಿ ಪ್ರತ್ಯೇಕವಾದ ಲೆಕ್ಕವನ್ನಿಡತಕ್ಕದ್ದು ಮತ್ತು (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇತರ ಮೊತ್ತಗಳನ್ನು, ಆ ನಿಧಿಗೆ ಸಂದಾಯ ಮಾಡತಕ್ಕದ್ದು.

(2) ನಿಧಿಯು–

(ಕ) ನಿಯೋಜಿತರಿಂದ ವಸೂಲು ಮಾಡಿದ ಎಲ್ಲ ಜುಲ್ಮಾನೆಗಳು;

(ಖ) 7ನೇ ಪ್ರಕರಣದ ಮೇರೆಗೆ ನಿಧಿಗೆ ವರ್ಗಾಯಿಸಲಾದ ಸಂದಾಯ ಮಾಡಿಲ್ಲದ ಎಲ್ಲ ಸಂಚಯಗಳು;

(ಖಖ) 7ಕ ಪ್ರಕರಣದ ಮೇರೆಗೆ ಸಂದಾಯ ಮಾಡಿದ ವಂತಿಗೆ;

(ಖಖಖ) 7ಖ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಯಾವುದೇ ದಂಡ ರೂಪದ ಬಡ್ಡಿ;

(ಗ) ಯಾವುದೇ ಸ್ವಇಚ್ಛೆಯಿಂದ ಮಾಡಿದ ದೇಣಿಗೆಗಳು;

(ಘ) 8ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ವರ್ಗಾಯಿಸಲಾದ ಯಾವುದೇ ನಿಧಿ ಮತ್ತು;

(ಙ) 9ನೇಯ ಪ್ರಕರಣದ ಮೇರೆಗೆ ಸಾಲವಾಗಿ ಪಡೆಯಲಾದ ಯಾವುದೇ ಮೊತ್ತ ಇವುಗಳನ್ನೊಳಗೊಂಡಿರತಕ್ಕದ್ದು.

(3) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊತ್ತಗಳನ್ನು ನಿಯಮಿಸಬಹುದಾದಂಥ ಏಜನ್ಸಿಗಳು; ಮತ್ತು ಅಂಥ ರೀತಿಯಲ್ಲಿ ಸಂಗ್ರಹಿಸತಕ್ಕುದು ಮತ್ತು ನಿಧಿಯ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಅವುಗಳ ಲೆಕ್ಕ ಪರಿಶೋಧನೆ ಮಾಡಿಸತಕ್ಕದ್ದು.

**4. ಮಂಡಲಿ:–** ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಧಿಯ ನಿರ್ವಹಣೆಯ ಉದ್ದೇಶಕ್ಕಾಗಿ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಮಂಡಲಿಗೆ

ವಹಿಸಿಕೊಟ್ಟಂಥ ಇತರ ಪ್ರಕಾರ್ಯಗಳನ್ನು ನಡೆಸುವುದಕ್ಕೆ ಇಡೀ ಕರ್ನಾಟಕ ರಾಜ್ಯಕ್ಕಾಗಿ ಮಂಡಲಿಯನ್ನು ರಚಿಸತಕ್ಕದ್ದು.

(2) ಮಂಡಳಿಯು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಕ) ನಿಯೋಜಕರು ಮತ್ತು ನಿಯೋಜಿತರ ಪ್ರತಿನಿಧಿಗಳು;

(ಖ) ಮಹಿಳೆಯರನ್ನು ಪ್ರತಿನಿಧಿಸುವ ಸ್ವತಂತ್ರ ಸದಸ್ಯರು; ಮತ್ತು

(ಗ) ಇತರ ಸ್ವತಂತ್ರ ಸದಸ್ಯರು,

ಪ್ರತಿಯೊಂದು ಪ್ರವರ್ಗದ ಸದಸ್ಯರ ಸಂಖ್ಯೆಯು ನಿಯಮಿಸಬಹುದಾದಂಥದ್ದಾಗಿರತಕ್ಕದ್ದು;

ಪರಂತು, ನಿಯೋಜಕ ಮತ್ತು ನಿಯೋಜಿತರಿಬ್ಬರು ಮಂಡಲಿಯಲ್ಲಿ ಸಮಾನ ಪ್ರಾತಿನಿಧ್ಯವನ್ನು ಹೊಂದಿರತಕ್ಕದ್ದು.

(3) ಮಂಡಲಿಯ ಸದಸ್ಯರು, ಅದರ ಸ್ವತಂತ್ರ ಸದಸ್ಯರ ಪೈಕಿ ಒಬ್ಬನನ್ನು ಮಂಡಲಿಯ ಅಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು.

(4) ಈ ಅಧಿನಿಯಮದ ಮೂಲಕ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು ಮಂಡಲಿಯ ಸದಸ್ಯರ ಪದಾವಧಿಯು, ಸರ್ಕಾರಿ ರಾಜಪತ್ರದಲ್ಲಿ ಅವರ ಹೆಸರುಗಳನ್ನು ಅಧಿಸೂಚಿಸಿದಂಥ ದಿನಾಂಕದಂದು ಪ್ರಾರಂಭವಾಗಿ 3 ವರ್ಷಗಳಾಗಿರತಕ್ಕದ್ದು.

(5) ಮಂಡಳಿಯು ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು ಯಾವುದಾದರೂ ಇದ್ದರೆ ಅವುಗಳು ಮತ್ತು ನಿಯೋಜಕರು ಮತ್ತು ನಿಯೋಜಿತರ ಪ್ರತಿನಿಧಿಗಳ ನೇಮಕಾತಿಯ ಷರತ್ತುಗಳು ನಿಯಮಿಸ ಬಹುದಾದಂಥವುಗಳಾಗಿರತಕ್ಕದ್ದು,

(6) ಮಂಡಲಿಯು, ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಅರ್ಜಿಸಲು, ಧಾರಣ ಮಾಡಲು ಮತ್ತು ವಿಲೇ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿದ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಲಿಯೆಂಬ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

**5. ಅನರ್ಹತೆಗಳು ಮತ್ತು ತೆಗೆದುಹಾಕುವುದು:–** (1) (ಕ) ಸಂಬಳ ಪಡೆಯುವ ಮಂಡಲಿಯ ನೌಕರನಾಗಿರುವ; ಅಥವಾ

(ಖ) ದಿವಾಳಿಯಾದ ಅಥವಾ ಯಾವುದೇ ಸಕಾಲದಲ್ಲಿ ಹಾಗೆಂದು ನ್ಯಾಯ ನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು ತಡೆಹಿಡಿದಿರುವ ಅಥವಾ ಅವನಿಗೆ ಸಾಲಕೊಟ್ಟಿರುವವರೊಂದಿಗೆ ರಾಜಿ ಮಾಡಿಕೊಂಡಿರುವ; ಅಥವಾ

(ಗ) ಮನೋವಿಕಲನಾಗಿರುವುದಾಗಿ ಕಂಡು ಬಂದ ಅಥವಾ ಅಸ್ವಸ್ಥಚಿತ್ತನಾಗುವ; ಅಥವಾ

(ಘ) ನಿರ್ಣೀತ ಅಪರಾಧಿಯಾಗುವ ಅಥವಾ ನೈತಿಕ ಅದ:ಪತನವನ್ನೊಳಗೊಂಡ ಯಾವುದೇ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ಣೀತನಾಗಿರುವ ನಿರ್ದೇಶಿತನಾದ

ಯಾವನೇ ವ್ಯಕ್ತಿಯನ್ನು ಮಂಡಲಿಯ ಸದಸ್ಯನನ್ನಾಗಿ ಆಯ್ಕೆ ಮಾಡತಕ್ಕದ್ದಲ್ಲ ಅಥವಾ ಹಾಗೆಂದು ಅವನನ್ನು ಮುಂದುವರಿಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು,–

(ಕ) (1)ನೇ ಉಪಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಅನರ್ಹತೆಗೆ ಒಳಪಟ್ಟಿರುವ ಅಥವಾ ಒಳಪಡುವ; ಅಥವಾ

(ಖ) ಮಂಡಲಿಯು ಅನುಮತಿ ಇಲ್ಲದೆ, ಮಂಡಲಿಯ ಮೂರು ಅನುಕ್ರಮ ಸಭೆಗಳಿಗಿಂತ ಹೆಚ್ಚು ಸಭೆಗಳಿಗೆ ಗೈರು ಹಾಜರಾಗಿರುವ

– ಯಾವನೇ ಸದಸ್ಯನನ್ನು ಪದದಿಂದ ತೆಗೆದುಹಾಕಬಹುದು.

**6. ಸದಸ್ಯನಿಂದ ಪದಕ್ಕೆ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು:–** (1) ಸದಸ್ಯನು, ಅವನ ಪದಕ್ಕೆ ರಾಜ್ಯ ಸರ್ಕಾರಕ್ಕೆ ಬರಹದಲ್ಲಿ ಅದರ ಬಗ್ಗೆ ನೋಟೀಸು ಕೊಡುವ ಮೂಲಕ ರಾಜೀನಾಮೆ ಕೊಡಬಹುದು ಮತ್ತು ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ ಅವನು ಅವನ ಪದವನ್ನು ತೆರವು ಮಾಡಿರುವುದಾಗಿ ಭಾವಿಸತಕ್ಕದ್ದು.

(2) ಸದಸ್ಯನ ಪದದಲ್ಲಿನ ಆಕಸ್ಮಿಕ ಖಾಲಿ ಸ್ಥಾನವನ್ನು ಸಂಬಂಧಪಟ್ಟ ಪ್ರಾಧಿಕಾರಿಯು ಅನುಕೂಲವಾದಷ್ಟು ಬೇಗನೆ ಭರ್ತಿ ಮಾಡತಕ್ಕುದು ಮತ್ತು ಹಾಗೆ ನಾಮನಿರ್ದೇಶಿತನಾದ ಸದಸ್ಯನು ಅವನ ಪೂರ್ವಾಧಿಕಾರಿಯ ಪದದ ಮುಕ್ತಾಯವಾಗದೇ ಇರುವ ಭಾಗಕ್ಕಾಗಿ ಪದಧಾರಣ ಮಾಡತಕ್ಕುದು.

(3) ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಗಳನ್ನು ಮಂಡಲಿಯಲ್ಲಿ ಖಾಲಿ ಸ್ಥಾನ ಇತ್ತೆಂಬ ಅಥವಾ ಮಂಡಲಿಯ ರಚನೆಯಲ್ಲಿ ಯಾವುದೇ ನ್ಯೂನತೆ ಇತ್ತೆಂಬ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

**7. ಸಂದಾಯ ಮಾಡಿಲ್ಲದ ಸಂಚಯಗಳು ಮತ್ತು ಅವುಗಳ ಬಗ್ಗೆ ಕ್ಲೇಮುಗಳು:–**(1) ಸಂದಾಯ ಮಾಡಿಲ್ಲದ ಎಲ್ಲ ಸಂಚಯಗಳನ್ನು ಪರಿತ್ಯಜಿಸಿದ ಸ್ವತ್ತೆಂಬುದಾಗಿ ಭಾವಿಸತಕ್ಕದ್ದು.

(2) 3ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ, ಮಂಡಲಿಗೆ ಸಂದಾಯ ಮಾಡಿದ ಯಾವುದೇ ಸಂದಾಯ ಮಾಡಿಲ್ಲದ ಸಂಚಯಗಳು ಅಂಥ ಸಂದಾಯ ಮಾಡಿದ ಮೇಲೆ, ಅದಕ್ಕೆ ಸಂಬಂಧಿಸಿದಂತೆ ನಿಯೋಜಿತನಿಗೆ ಸಂದಾಯ ಮಾಡುವ ಹೊಣೆಗಾರಿಕೆಯಿಂದ ನಿಯೋಜಿತನನ್ನು ವಿಮೋಚನೆಗೊಳಿಸತಕ್ಕದ್ದು. ಆದರೆ ಇದು ಮಂಡಲಿಗೆ ಸಂದಾಯದ ಮೊಬಲಗಿಗೆ ಮಾತ್ರ ವ್ಯಾಪ್ತವಾಗುತ್ತದೆ. ಹಿಂದೆ ಹೇಳಿದಂತೆ ವ್ಯಾಪ್ತವಾಗುವಷ್ಟರ ಮಟ್ಟಿಗೆ ನಿಯೋಜಿತನಿಗೆ ಮಾಡಬೇಕಾದ ಹೊಣೆಗಾರಿಕೆಯು ಈ ಪ್ರಕರಣದ ಮುಂಬರುವ ಉಪಬಂಧಗಳಿಗೊಳಪಟ್ಟು ಮಂಡಲಿಗೆ ವರ್ಗಾಯಿತವಾಗಿರುವುದಾಗಿ ಬಾವಿಸತಕ್ಕದ್ದು.

(3) ಯಾವುದೇ ಸಂದಾಯ ಮಾಡಿಲ್ಲದ ಸಂಚಯಗಳು ಮಂಡಲಿಗೆ ಸಂದಾಯ ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗ, ಮಂಡಲಿಯು;–

(ಕ) ಯಾವ ಕಾರ್ಖಾನೆ ಅಥವಾ ಕಾರ್ಯ ಸಂಸ್ಥೆಯಲ್ಲಿ ಸಂದಾಯ ಮಾಡಿಲ್ಲದ ಸಂಚಯವನ್ನು ಗಳಿಸಲಾಗಿತ್ತೋ ಆ ಕಾರ್ಖಾನೆ ಅಥವಾ ಕಾರ್ಯ ಸಂಸ್ಥೆಯ ನೋಟೀಸು ಬೋರ್ಡಿನ ಮೇಲೆ ಪ್ರದರ್ಶಿಸಿದ ಮತ್ತು;

(ಖ) ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ, ಮತ್ತು;

(ಗ) ಯಾವ ಪ್ರದೇಶದಲ್ಲಿ ಯಾವ ಕಾರ್ಖಾನೆ ಅಥವಾ ಕಾರ್ಯ ಸಂಸ್ಥೆಯಲ್ಲಿ ಸಂದಾಯ ಮಾಡಿಲ್ಲದ ಸಂಚಯವನ್ನು ಗಳಿಸಲಾಯಿತೋ ಆ ಕಾರ್ಖಾನೆ ಅಥವಾ ಕಾರ್ಯ ಸಂಸ್ಥೆಯು ಇರುವ ಪ್ರದೇಶದಲ್ಲಿ

ಪ್ರಸಾರದಲ್ಲಿರುವ ಯಾವುದೇ ಎರಡು ವೃತ್ತ ಪತ್ರಿಕೆಗಳಲ್ಲೂ ಸಹ ಪ್ರಕಟವಾಗುವ ಅಥವಾ ಕ್ಲೇಮಿನ ಮೊಬಲಗನ್ನು ಗಮನಕ್ಕೆ ತೆಗೆದುಕೊಂಡು ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸಿದ ನೋಟೀಸಿನ ಮೂಲಕ (ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ) ನಿಯೋಜಿತರಿಗೆ ಬಾಕಿಯಾದ ಯಾವುದೇ ಸಂದಾಯಕ್ಕಾಗಿ ಅವರಿಂದ ಕ್ಲೇಮುಗಳನ್ನು ಆಹ್ವಾನಿಸತಕ್ಕದ್ದು. ಪ್ರತಿ ವರ್ಷ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಹಿಂದೆ ಹೇಳಿದಂಥ ರೀತಿಯಲ್ಲಿ ಮಂಡಲಿಗೆ ಸಂದಾಯ ಮಾಡಿಲ್ಲದ ಸಂಚಯದ ಸಂದಾಯದ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ ಪ್ರಕಟಿಸತಕ್ಕದ್ದು.

(4) (3)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ಆ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಕೊಡಲಾಗಿತ್ತೋ ಹೇಗೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅದನ್ನು ಹಾಗೆ ಕೊಡಲಾಗಿತ್ತೆಂಬ ಬಗ್ಗೆ ಮಂಡಲಿಯ ಪ್ರಮಾಣ ಪತ್ರವು ನಿರ್ಣಾಯಕವಾಗಿರತಕ್ಕದ್ದು.

(5) ಅಂಥ ಕ್ಲೇಮಿಗೆ ಸಂಬಂಧಿಸಿದಂತೆ ನೋಟೀಸಿನ ಮೊದಲ ಪ್ರಕಟಣೆಯ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಯೊಳಗೆ ನೋಟೀಸುಗಳಿಗೆ ಉತ್ತರವಾಗಿಯೇ ಆಗಲಿ ಅಥವಾ ಅನ್ಯಥಾ ಆಗಲಿ ಕ್ಲೇಮನ್ನು ಸ್ವೀಕರಿಸಿದರೆ ಮಂಡಲಿಯು, ಅಂಥ ಕ್ಲೇಮನ್ನು ಆ ಕಾರ್ಖಾನೆ ಅಥವಾ ಕಾರ್ಯ ಸಂಸ್ಥೆಯು ಇರುವಂಥ 15ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮಜೂರಿ ಸಂದಾಯ ಅಧಿನಿಯಮ, 1936ರ ಪ್ರಾಧಿಕಾರಿಗೆ ವರ್ಗಾಯಿಸತಕ್ಕುದು ಮತ್ತು ಆ ಪ್ರಾಧಿಕಾರಿಯು ಅಂಥ ಕ್ಲೇಮಿನ ಬಗ್ಗೆ ನ್ಯಾಯ ನಿರ್ಣಯ ಮಾಡಲು ಮತ್ತು ತೀರ್ಮಾನಿಸಲು ಮುಂದುವರಿಯತಕ್ಕದ್ದು. ಅಂಥ ಕ್ಲೇಮನ್ನು ಚುನಾವಣೆ ಮಾಡುವಲ್ಲಿ ಆ ಪ್ರಾಧಿಕಾರಿಯು ಆ ಅಧಿನಿಯಮದ ಉಪಬಂಧಗಳ ಮೂಲಕ ಪ್ರಧಾನ ಮಾಡಿದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳನ್ನು ಜಾರಿಗೊಳಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಯನ್ನು (ಅದು ಅನ್ವಯವಾಗಬಹುದಾದಷ್ಟರ ಮಟ್ಟಿಗೆ) ಅನುಸರಿಸತಕ್ಕದ್ದು.

(6) ಹಿಂದೆ ಹೇಳಿದ ಪ್ರಾಧಿಕಾರಿಗೆ ಅಂಥ ಯಾವುದೇ ಕ್ಲೇಮು ಸಂದಾಯವನ್ನು ಸ್ವೀಕರಿಸುವ ಹಕ್ಕು ಸ್ಥಾಪಿತವಾಗಿರುವ ಹಾಗೆ ಸಿಂಧುವಾಗಿದೆಯೆಂದು ಮನದಟ್ಟಾದರೆ, ಅವನು ಯಾವುದಕ್ಕೆ ಸಂಬಂಧಪಟ್ಟಂತೆ ಆ ಕ್ಲೇಮನ್ನು ಮಾಡಲಾಗಿದೆಯೋ ಆ ಸಂದಾಯವಾಗಿಲ್ಲದ ಸಂಚಯವು ಪರಿತ್ಯಜಿಸಿದ ಸ್ವತ್ತೆಂಬುದಾಗಿ ಭಾವಿಸುವುದು ನಿಂತು ಹೋಗತಕ್ಕದ್ದೆಂದು ತೀರ್ಮಾನಿಸತಕ್ಕದ್ದು ಮತ್ತು ಕ್ಲೇಮು ಮಾಡಲಾದ ಬಾಕಿಗಳ ಒಟ್ಟನ್ನು ಅಥವಾ ಪ್ರಾಧಿಕಾರಿಯು ಸರಿಯಾಗಿ ಬಾಕಿಯಿದೆ ಎಂದು ತೀರ್ಮಾನಿಸಿದಂತೆ ಅದರ ಅಂಥ ಭಾಗವನ್ನು ನಿಯೋಜಿತರಿಗೆ ಸಂದಾಯ ಮಾಡಲು, ಮಂಡಲಿಗೆ ಆದೇಶಿಸತಕ್ಕದ್ದು, ಮತ್ತು ಮಂಡಲಿಯು ತದನುಸಾರವಾಗಿ ಸಂದಾಯವನ್ನು ಮಾಡತಕ್ಕದ್ದು.

ಪರಂತು, ಮಂಡಲಿಯು, ಆ ಕ್ಲೇಮಿನ ಸಂಬಂಧದಲ್ಲಿ ಸಂದಾಯ ಮಾಡಿಲ್ಲದ ಸಂಚಯಗಳೆಂದು 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ, ಸಂದಾಯ ಮಾಡಿದುದಕ್ಕಿಂತ ಹೆಚ್ಚಿನ ಯಾವುದೇ ಮೊತ್ತವನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದಲ್ಲ.

(7) ಸಂದಾಯಕ್ಕಾಗಿನ ಕ್ಲೇಮನ್ನು ತಿರಸ್ಕರಿಸಿದರೆ, ಆ ನಿಯೋಜಿತನು, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲನ್ನು ಮಾಡಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು ಮತ್ತು ಮಂಡಲಿಯು ಅಪೀಲಿನಲ್ಲಿ ಮಾಡಿದ ಯಾವುದೇ ಆದೇಶವನ್ನು ಪಾಲಿಸತಕ್ಕದ್ದು. ಆ ಪ್ರಾಧಿಕಾರಿಯ ತೀರ್ಮಾನದ ಅರವತ್ತು ದಿವಸಗಳೊಳಗಾಗಿ ಅಪೀಲನ್ನು ಸಲ್ಲಿಸತಕ್ಕದ್ದು.

(8) ಆ ಪ್ರಾಧಿಕಾರಿಯ ತೀರ್ಮಾನವು ಹಿಂದೆ ಹೇಳಿದ ಅಪೀಲಿಗೆ ಮತ್ತು ಜಿಲ್ಲಾ ನ್ಯಾಯಾಲಯದ ಅಪೀಲಿನಲ್ಲಿನ ತೀರ್ಮಾನಕ್ಕೆ ಒಳಪಟ್ಟು ಸಂದಾಯವನ್ನು ಸ್ವೀಕರಿಸುವ ಹಕ್ಕು, ಸಂದಾಯ ಮಾಡಲು ಮಂಡಲಿಯ ಹೊಣೆಗಾರಿಕೆಯ ಬಗ್ಗೆ ಮತ್ತು ಆ ಮೊಬಲಗು ಯಾವುದಾದರೂ ಇದ್ದರೆ, ಅದರ ಬಗ್ಗೆಯೂ ಸಹ ಅಂತಿಮವಾಗಿರತಕ್ಕದ್ದು.

(9) 5ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಯಾವುದೇ ಕ್ಲೇಮನ್ನೂ ಮಾಡದಿದ್ದರೆ, ಅಥವಾ ಪ್ರಾಧಿಕಾರಿಯು ಹಿಂದೆ ಹೇಳಿದಂತೆ ಅಥವಾ ಅಪೀಲಿನಲ್ಲಿ ನ್ಯಾಯಾಲಯವು ಕ್ಲೇಮನ್ನು ನಿರಾಕರಿಸಲಾಗಿದ್ದರೆ, ಆಗ ಅಂಥ ಕ್ಲೇಮಿಗೆ ಸಂಬಂಧಿಸಿದಂತೆ ಸಂದಾಯ ಮಾಡಿಲ್ಲದ ಸಂಚಯಗಳು ಸ್ವಾಮ್ಯರಹಿತವಾದುದೆಂದು ರಾಜ್ಯ ಸರ್ಕಾರಕ್ಕೆ ಒದಗಿಬರತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು ಮತ್ತು ಆ ತರುವಾಯ ಹಸ್ತಾಂತರಣ ಪತ್ರವಿಲ್ಲದೆ ನಿಧಿಗೆ ವರ್ಗಾವಣೆಯಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅದರ ಭಾಗವಾಗಿರತಕ್ಕದ್ದು.

7ಕ. **ವಂತಿಗೆ.–** (1) ಕಾರ್ಯ ಸಂಸ್ಥೆಯಲ್ಲಿರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ, ನಿಯೋಜಕ, ನಿಯೋಜಿತ ಮತ್ತು ರಾಜ್ಯ ಸರ್ಕಾರದಿಂದ ಸಂದಾಯವಾಗಬೇಕಾದ ನಿಯೋಜಕನ ವಂತಿಗೆ, ನಿಯೋಜಿತರ ವಂತಿಗೆ ಮತ್ತು ರಾಜ್ಯ ಸರ್ಕಾರದ ವಂತಿಗೆ, ಇವುಗಳನ್ನು ಒಳಗೊಂಡ ವಂತಿಗೆಯನ್ನು ಮಂಡಲಿಗೆ, ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ವಂತಿಗೆಗಳು ಆ ನಿಧಿಯ ಭಾಗವಾಗತಕ್ಕದ್ದು.

(2) ಯಾವುದೇ ವರ್ಷದ ಡಿಸೆಂಬರ್ 31 ರಂದು ಕಾರ್ಯ ಸಂಸ್ಥೆಯ ರಿಜಿಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ನಿಯೋಜಿತ ಮತ್ತು ರಾಜ್ಯ ಸರ್ಕಾರವು ಆ ವರ್ಷಕ್ಕಾಗಿ ಒಂದು ರೂಪಾಯಿ, ಎರಡು ರೂಪಾಯಿಗಳು ಅಥವಾ ಒಂದು ರೂಪಾಯಿಯ ಮೊತ್ತವನ್ನು ಅನುಕ್ರಮವಾಗಿ ವಂತಿಗೆಯೆಂದು ಸಂದಾಯ ಮಾಡತಕ್ಕದ್ದು.

(3) ಯಾವುದೇ ವರ್ಷಕ್ಕೆ ಸಂಬಂಧಿಸಿದಂತೆ ನಿಯೋಜಕನ ವಂತಿಗೆ ಮತ್ತು ನಿಯೋಜಿತನ ವಂತಿಗೆಯನ್ನು ನಿಯೋಜಕನು ಮುಂಬರುವ ವರ್ಷದ ಜನವರಿ 15ರಂದು ಅಥವಾ ಅದಕ್ಕೆ ಮುಂಚೆ ಚೆಕ್, ಮನಿಅರ್ಡರ್ ಮೂಲಕ ಅಥವಾ ನಗದು ರೂಪದಲ್ಲಿ ಮಂಡಲಿಗೆ ಸಂದಾಯ ಮಾಡತಕ್ಕದ್ದು ಮತ್ತು ವಂತಿಗೆಯನ್ನು ಜಮೆ ಮಾಡುವುದರ ವೆಚ್ಚಗಳನ್ನು ನಿಯೋಜಕನು ಸ್ವತಃ ಭರಿಸತಕ್ಕದ್ದು.

(4) ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅದರ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳಿಗೊಳಪಟ್ಟು ನಿಯೋಜಕನ ನಿಯೋಜಿತನ ವಂತಿಗೆಯನ್ನು ನಿಯೋಜಿತನಿಂದ, ಅವನ ಮಜೂರಿಗಳಿಂದ ಕಳೆದುಕೊಳ್ಳುವ ಮೂಲಕ ವಸೂಲು ಮಾಡುವ ಹಕ್ಕುಳ್ಳವನಾಗಿರತಕ್ಕದು ಮತ್ತು ಅನ್ಯಥಾ ಅಲ್ಲ ಮತ್ತು ಅಂಥ ಕಳೆತವನ್ನು ಮಜೂರಿಗಳ ಸಂದಾಯ ಅಧಿನಿಯಮ, 1936ರ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಳಿಸಲಾದುದು ಎಂದು ಭಾವಿಸತಕ್ಕದ್ದು:

ಪರಂತು, ಯಾವುದೇ ಅಂಥ ಕಳೆತವನ್ನು ನಿಯೋಜಿತನು ಸಂದಾಯ ಮಾಡಬೇಕಾದ ವಂತಿಗೆಯ ಮೊಬಲಗಿಗಿಂತ ಹೆಚ್ಚಿಗೆಯಾಗಿ ಮಾಡತಕ್ಕದ್ದಲ್ಲ ಮತ್ತು ಆ ವಂತಿಗೆಯು ಯಾವ ವರ್ಷಕ್ಕೆ ಸಂಬಂಧಪಡುವುದೋ ಆ ವರ್ಷದ ಡಿಸೆಂಬರ್ ತಿಂಗಳಿಗಾಗಿನ ಮಜೂರಿಗಳನ್ನು ಹೊರತುಪಡಿಸಿ, ಇತರ ಯಾವುದೇ ಮಜೂರಿಗಳಿಂದ ಅದನ್ನು ಕಳೆಯತಕ್ಕದ್ದಲ್ಲ:

ಮತ್ತು ಪರಂತು, ಅಜಾಗರೂಕತೆಯಿಂದಾಗಿ ಅಥವಾ ಅನ್ಯಥಾ ಹಿಂದೆ ಹೇಳಿದಂತೆ ಆ ತಿಂಗಳಿಗಾಗಿ ನಿಯೋಜಿತನ ಮಜೂರಿಗಳಿಂದ ಯಾವುದೇ ಕಳೆತವನ್ನು ಮಾಡಿರದಿದ್ದರೆ ಅಂಥ ಕಳೆತವನ್ನು ಅಂಥ ನಿಯೋಜಿತನ ಯಾವುದೇ ತರುವಾಯದ ತಿಂಗಳು ಅಥವಾ ತಿಂಗಳುಗಳಿಗಾಗಿನ ಮಜೂರಿಗಳಿಂದ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪರಿಶೀಲಕರ ಬರಹದಲ್ಲಿನ ಅನುಮತಿಯನ್ನು ಪಡೆದು ಮಾಡಬಹುದು.

(5) ಯಾವುದೇ ಒಪ್ಪಂದ ಅಥವಾ ಕರಾರಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದಾಗ್ಯೂ, ಯಾವನೇ ನಿಯೋಜಕನು ನಿಯೋಜಕನ ವಂತಿಗೆಯನ್ನು ನಿಯೋಜಿತನಿಗೆ ಸಂದಾಯ ಮಾಡಬೇಕಾದ ಯಾವುದೇ ಮಜೂರಿಗಳಿಂದ ಕಳೆಯತಕ್ಕದ್ದಲ್ಲ ಅಥವಾ ನಿಯೋಜಿತನಿಂದ ಅದನ್ನು ಅನ್ಯಥಾ ವಸೂಲು ಮಾಡತಕ್ಕದ್ದಲ್ಲ.

(6) ಈ ಪ್ರಕರಣದ ಮೇರೆಗೆ ನಿಯೋಜಿತನ ಮಜೂರಿಗಳಿಂದ ನಿಯೋಜಿತನು ಕ್ರಮಬದ್ಧವಾಗಿ ಕಳೆದ ಯಾವುದೇ ಮೊತ್ತವನ್ನೂ, ಯಾವುದಕ್ಕೆ ಸಂಬಂಧಿಸಿದಂತೆ ಅದನ್ನು ಕಳೆಯಲಾಯಿತೋ ಆ ವಂತಿಗೆಯನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ನಿಯೋಜಿತನಿಂದ ಅವನಿಗೆ ವಹಿಸಿಕೊಡಲಾದುದೆಂದು ಭಾವಿಸತಕ್ಕದ್ದು.

(7) ವೆಲ್‌ಫೇರ್ ಕಮೀಷನರನು ಸಾಧ್ಯವಾದಷ್ಟು ಬೇಗನೆ ಪ್ರತಿ ವರ್ಷವೂ ಜನವರಿ ಮುಗಿದ ತರುವಾಯ, ನಿಯಮಿಸಿದ ನಮೂನೆಯಲ್ಲಿ, ಅವನ ಕಾರ್ಯ ಸಂಸ್ಥೆಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ನಿಯೋಜಿತನ ವಂತಿಗೆಯ ಒಟ್ಟು ಮೊಬಲಗನ್ನು ತೋರಿಸುವ ವಿವರ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು. ವೆಲ್‌ಫೇರ್ ಕಮೀಷನರನಿಂದ ವಿವರ ಪತ್ರವನ್ನು ಸ್ವೀಕರಿಸಿದ ಮೇಲೆ, ರಾಜ್ಯ ಸರ್ಕಾರವು ಅಂಥ ಪ್ರತಿಯೊಂದು ಕಾರ್ಯ ಸಂಸ್ಥೆಗೆ ಸಂಬಂಧಿಸಿದಂತೆ ಅದರ ವಂತಿಗೆಯನ್ನು ಮಂಡಲಿಗೆ ಸಂದಾಯ ಮಾಡತಕ್ಕದ್ದು.

**7ಖ. ತಗಾದೆ ನೋಟೀಸಿನ ತರುವಾಯ ಸಂದಾಯ ಮಾಡಿಲ್ಲದ ಸಂಚಯ ಅಥವಾ ಜುಲ್ಮಾನೆಗಳ ಮೇಲಣ ಬಡ್ಡಿ.–** (1) ನಿಯೋಜಕನು ಸಂದಾಯ ಮಾಡಿಲ್ಲದ ಸಂಚಯಗಳ ಯಾವುದೇ ಮೊಬಲಗನ್ನು ಅಥವಾ ನಿಯೋಜಿತರಿಂದ ವಸೂಲು ಮಾಡಿದ ಜುಲ್ಮಾನೆಗಳನ್ನು ಅಥವಾ 7ಕ ಪ್ರಕರಣದ ಮೇರೆಗಿನ ನಿಯೋಜಕರ ಮತ್ತು ನಿಯೋಜಿತರ ವಂತಿಗೆಗಳ ಮೊಬಲಗನ್ನು ಅದನ್ನು ಸಂದಾಯ ಮಾಡಲು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಅವನನ್ನು ಅಗತ್ಯಪಡಿಸಿದ ಕಾಲದೊಳಗೆ ಮಂಡಲಿಗೆ ಸಂದಾಯ ಮಾಡದಿದ್ದರೆ, ವೆಲ್‌ಫೇರ್ ಕಮೀಷನರನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಮೊಬಲಗನ್ನು ಸಂದಾಯ ಮಾಡಲು ಅಂಥ ನಿಯೋಜಕನಿಗೆ ಒಂದು ನೋಟೀಸನ್ನು ಜಾರಿ ಮಾಡುವಂತೆ ಮಾಡಬಹುದು, ಅದು ಅಂಥ ನೋಟೀಸಿನ ಜಾರಿಯ ದಿನಾಂಕದಿಂದ ಮೂವತ್ತು ದಿವಸಗಳಿಗಿಂತ ಹೆಚ್ಚಿಗೆಯಾಗಿರತಕ್ಕದ್ದಲ್ಲ.

(2) ನಿಯೋಜಕನು, ನೋಟೀಸಿನಲ್ಲಿ ಆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅಂಥ ಯಾವುದೇ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ ಅವನು, ಆ ಮೊಬಲಗಿನ ಜೊತೆಗೆ ಮಂಡಲಿಗೆ ;

(ಕ) ಮೊದಲ ಮೂರು ತಿಂಗಳಿಗಾಗಿ, ಆ ನೋಟೀಸಿಗೆ ಅನುಸಾರವಾಗಿ ಅದನ್ನು ಅವನು ಸಂದಾಯ ಮಾಡಬೇಕಾಗಿದ್ದಂಥ ಕೊನೆಯ ದಿನಾಂಕದ ತರುವಾಯ ಪ್ರತಿಯೊಂದು ಪೂರ್ಣ ತಿಂಗಳಿಗಾಗಿ ಸದರಿ ಮೊಬಲಗಿನ ಬಗ್ಗೆ ವರ್ಷಕ್ಕೆ, ಶೇಕಡಾ ಹನ್ನೆರಡರಂತೆ; ಮತ್ತು

(ಖ) ಆ ತರುವಾಯ ಆ ಮೊಬಲಗನ್ನು ಸಂದಾಯ ಮಾಡಲು ಅವನು ತಪ್ಪುವುದು ಮುಂದುವರಿದ ಕಾಲದಲ್ಲಿ ಪ್ರತಿಯೊಂದು ಪೂರ್ಣ ತಿಂಗಳಿಗಾಗಿ ಆ ಮೊಬಲಗಿನ ಬಗ್ಗೆ ವರ್ಷಕ್ಕೆ ಶೇಕಡಾ ಹದಿನೆಂಟರಂತೆ

ಸರಳ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

**8. ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ.–** (1) ಅ ನಿಧಿಯು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಅದರ ಉದ್ದೇಶಕ್ಕಾಗಿ ನ್ಯಾಸಧಾರಿಗಳೆಂದು ಅದು ಅದನ್ನು ಧಾರಣ ಮಾಡತಕ್ಕದ್ದು ಮತ್ತು ವಿನಿಯೋಗಿಸತಕ್ಕದ್ದು. ಅದರಲ್ಲಿನ ಹಣಗಳನ್ನು ಮಂಡಲಿಯು, ಕಾರ್ಮಿಕರು ಮತ್ತು ಅವರ ಆಶ್ರಿತರ ಕಲ್ಯಾಣವನ್ನು ಸಂವರ್ಧಿಸಲು ಕಾಲಕಾಲಕ್ಕೆ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಕ್ರಮಗಳನ್ನು ಕಾರ್ಯಗತಗೊಳಿಸುವುದರ ಬಗೆಗಿನ ಖರ್ಚನ್ನು ಭರಿಸಲು ಮಂಡಲಿಯು ಉಪಯೋಗಿಸತಕ್ಕದ್ದು.

(2) (1)ನೇ ಉಪ ಪ್ರಕರಣದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ನಿಧಿಯಲ್ಲಿನ ಹಣಗಳನ್ನು ಮಂಡಲಿಯು, ಈ ಕೆಳಕಂಡವುಗಳ ಮೇಲಿನ ವೆಚ್ಚವನ್ನು ಭರಿಸಲು ಉಪಯೋಗಿಸಬಹುದು;–

(ಕ) ವಾಚನಾಲಯಗಳು ಮತ್ತು ಗ್ರಂಥಾಲಯಗಳನ್ನು ಒಳಗೊಂಡು ಸಮುದಾಯ ಮತ್ತು ಸಮಾಜ ಶಿಕ್ಷಣ ಕೇಂದ್ರಗಳು;

(ಖ) ಸಮುದಾಯ ಅವಶ್ಯಕತೆಗಳು;

(ಗ) ಆಟಗಳು ಮತ್ತು ಕ್ರೀಡೆಗಳು;

(ಘ) ವಿಹಾರಗಳು, ಪ್ರವಾಸಗಳು ಮತ್ತು ವಿಶ್ರಾಂತಿ ಗೃಹಗಳು;

(ಙ) ಮನೋರಂಜನೆ ಮತ್ತು ಇತರ ಬಗೆಯ ವಿನೋದಗಳು;

(ಚ) ಮಹಿಳೆಯರು ಮತ್ತು ನಿರುದ್ಯೋಗ ವ್ಯಕ್ತಿಗಳಿಗಾಗಿ ಗೃಹ ಕೈಗಾರಿಕೆಗಳು ಮತ್ತು ಉಪ ಉದ್ಯೋಗಗಳು;

(ಛ) ಸಾಮಾಜಿಕ ಸ್ವರೂಪದ ಸಮುದಾಯ ಚಟುವಟಿಕೆಗಳು;

(ಜ) ಈ ಅಧಿನಿಯಮದ ಉದ್ದೇಶಗಳಿಗಾಗಿ, ನೇಮಕಗೊಂಡ ಸಿಬ್ಬಂದಿಯ ಸಂಬಳಗಳು ಮತ್ತು ಭತ್ಯೆಗಳನ್ನು ಒಳಗೊಂಡು ಅಧಿನಿಯಮವನ್ನು ನಿರ್ವಹಿಸುವ ಬಗ್ಗೆ ಖರ್ಚು;

(ಝ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ಕಾರ್ಮಿಕರ ಜೀವನದ ಮಟ್ಟವನ್ನು ಸುಧಾರಿಸುವ ಮತ್ತು ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವಂಥ ಇತರ ಉದ್ದೇಶಗಳು:

ಪರಂತು, ಆ ನಿಧಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವ ಕ್ರಮವನ್ನು ಕಾರ್ಯಗತಗೊಳಿಸಲು ನಿಯೋಜಕನನ್ನು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಕ್ರಮಕ್ಕೆ ಹಣ ಒದಗಿಸಲು ಉಪಯೋಗಿಸತಕ್ಕದ್ದಲ್ಲ;

ಮತ್ತು ಪರಂತು, ಮಜೂರಿಗಳ ಸಂದಾಯ ಅಧಿನಿಯಮ, 1936 ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಂದಾಯ ಮಾಡಿಲ್ಲದ ಸಂಚಯಗಳನ್ನು ಮತ್ತು ಜುಲ್ಮಾನೆಗಳನ್ನು ಮಂಡಲಿಗೆ ಸಂದಾಯ ಮಾಡತಕ್ಕದ್ದು ಮತ್ತು ಅದು ಈ ಅಧಿನಿಯಮದ ಮೇರೆಗೆ ಮಂಡಲಿಯು ಖರ್ಚು ಮಾಡತಕ್ಕದ್ದು.

(3) ಮಂಡಲಿಯು ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದು ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರವು ಅನುಮೋದಿಸಿರುವ ಯಾವುದೇ ಚಟುವಟಿಕೆಯ ಸಹಾಯಾರ್ಥವಾಗಿ ಯಾವನೇ ನಿಯೋಜಕ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ನಿಕಾಯಕ್ಕೆ ನಿಧಿಯೊಳಗಿಂದ ಅನುದಾನವನ್ನು ಕೊಡಬಹುದು.

(4) ಯಾವುದೇ ನಿರ್ದಿಷ್ಟ ವೆಚ್ಚ ನಿಧಿಗೆ ಖರ್ಚು ಹಾಕಬಹುದು ಅಥವಾ ಹಾಕಕೂಡದೋ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಆ ವಿಷಯವನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಕೊಡುವ ತೀರ್ಮಾನ ಅಂತಿಮವಾಗಿರತಕ್ಕದ್ದು.

(5) ಮಂಡಲಿಗೆ ಕಾರ್ಮಿಕ ಕಲ್ಯಾಣ ನಿಧಿಯನ್ನು ಕ್ರಮಬದ್ಧವಾಗಿ ಮಂಡಲಿಗೆ ವರ್ಗಾಯಿಸಲಾಗಿದ್ದರೆ, ಯಾವುದೇ ಸಂಸ್ಥೆಯ ಆ ನಿಧಿಯಿಂದ ಹಣಕಾಸು ಒದಗಿಸಿದ ಯಾವುದೇ ಚಟುವಟಿಕೆಯನ್ನು ಮಂಡಲಿಯು ಮುಂದುವರಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**9. ಸಾಲ ಪಡೆಯಲು ಮಂಡಲಿಯ ಅಧಿಕಾರ:–** ಮಂಡಲಿಯು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಮತ್ತು ಈ ಅಧಿನಿಯಮದ ಉಪಬಂಧಗಳು ಮತ್ತು ಈ ಬಗ್ಗೆ ನಿರ್ದಿಷ್ಟಪಡಿಸ ಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಅಗತ್ಯವಾದ ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದು.

**10. ನಿಧಿಯ ಹೂಡಿಕೆ:–** ನಿಧಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಮುಂಚಿತವಾಗಿ ವಿನಿಯೋಗಿಸಲಾಗದಿರುವಲ್ಲಿ, ಮಂಡಲಿಯು ಅದನ್ನು ಭಾರತ ನ್ಯಾಸ ಅಧಿನಿಯಮ, 1882ರ 20ನೇ ಪ್ರಕರಣದ (ಕ) ಯಿಂದ (ಫ) ಮತ್ತು (ಚ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತೆಯಲ್ಲಿ ಹೂಡತಕ್ಕದ್ದು.

**11. ಮಂಡಲಿಗೆ ರಾಜ್ಯ ಸರ್ಕಾರದಿಂದ ನಿರ್ದೇಶನ:–** ರಾಜ್ಯ ಸರ್ಕಾರವು ನಿಧಿಯಿಂದ ಮಂಡಲಿಗೆ ಮಾಡಲಾಗುವ ವೆಚ್ಚಗಳ ಸಂಬಂಧದಲ್ಲಿ ಅಥವಾ ಅಧಿನಿಯಮದ ಇತರ ಉದ್ದೇಶಗಳನ್ನು ಈಡೇರಿಸುವಲ್ಲಿ ಅದರ ಅಭಿಪ್ರಾಯದಲ್ಲಿ ಅವಶ್ಯ ಅಥವಾ ವಿಹಿತವಾಗಿರುವಂಥ ನಿರ್ದೇಶನಗಳನ್ನು ಕೊಡಬಹುದು, ಅಂಥ ನಿರ್ದೇಶನಗಳನ್ನು ಪಾಲಿಸುವುದು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

12. **ವೆಲ್‌ಫೇರ್ ಕಮೀಷನರರ ನೇಮಕಾತಿ ಮತ್ತು ಅಧಿಕಾರಗಳು:–** (1) ಮಂಡಲಿಯು ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ವೆಲ್‌ಫೇರ್ ಕಮೀಷನರರನ್ನು ನೇಮಕ ಮಾಡತಕ್ಕದ್ದು.

(2) ವೆಲ್‌ಫೇರ್ ಕಮೀಷನರರು, ಮಂಡಲಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕುದು.

(3) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಕ್ರಮಬದ್ಧವಾಗಿ ಈಡೇರಿಸುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದು ವೆಲ್‌ಫೇರ್ ಕಮೀಷನರರ ಕರ್ತವ್ಯವಾಗಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವನು ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮೇರೆಗೆ ಮಂಡಲಿಯು ತೆಗೆದುಕೊಂಡ ತೀರ್ಮಾನಗಳನ್ನು ಕಾರ್ಯಗತಗೊಳಿಸುವ ಯಾವುದೇ ಆದೇಶವನ್ನು ಒಳಗೊಂಡು ಅವನು ಸೂಕ್ತವೆಂದು ಯೋಚಿಸಬಹುದಾದ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಅಸಂಗತವಾಗಿರದಂಥ ಆದೇಶಗಳನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

**13. ಪರಿಶೀಲಕರ ನೇಮಕ:–** (1) ರಾಜ್ಯ ಸರ್ಕಾರವು, ನಿಧಿಗೆ ಸಂದಾಯ ಮಾಡಬೇಕಾದ ಮೊತ್ತಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಲು ಪರಿಶೀಲಕರನ್ನು ನೇಮಕ ಮಾಡಬಹುದು.

(2) ಯಾವನೇ ಪರಿಶೀಲಕನು,–

(ಕ) ಅವನು ಸೂಕ್ತವೆಂದು ಯೋಚಿಸಬಹುದಾದಂಥ ಸಹಾಯದೊಂದಿಗೆ ಯಾವುದೇ ಯುಕ್ತ ಕಾಲದಲ್ಲಿ ಯಾವುದೇ ಆವರಣವನ್ನು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪ್ರವೇಶಿಸಬಹುದು.

(ಖ) ನಿಯಮಿಸಬಹುದಾದಂಥ ಇತರ ಯಾವುದೇ ಅಧಿಕಾರಗಳನ್ನು ಚಲಾಯಿಸಬಹುದು.

**14. ಮಂಡಲಿಯಿಂದ ಲಿಪಿಕ ಮತ್ತು ಇತರ ಸಿಬ್ಬಂದಿಯ ನೇಮಕಾತಿ:–** ಮಂಡಲಿಯು ನಿಧಿಯಿಂದ ಹಣ ಒದಗಿಸಿದ ಚಟುವಟಿಕೆಗಳನ್ನು ನಡೆಸುವುದು ಮತ್ತು ಅವುಗಳ ಮೇಲ್ವಿಚಾರಣೆ ಮಾಡಲು ಅವಶ್ಯವಾದ ಲಿಪಿಕ ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಯನ್ನು ನೇಮಕ ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

ಪರಂತು, ಹಾಗೆ ನೇಮಕಗೊಂಡ ಸಿಬ್ಬಂದಿಯ ವೆಚ್ಚಗಳು ಮತ್ತು ಇತರ ಆಡಳಿತಾತ್ಮಕ ವೆಚ್ಚಗಳು ನಿಧಿಯ ವಾರ್ಷಿಕ ಆದಾಯದ ನಿಯಮಿಸಲಾದ ಶೇಕಡಾವಾರನ್ನು ಮೀರತಕ್ಕದ್ದಲ್ಲ.

**15. ಮಂಡಲಿಯ ಸಿಬ್ಬಂದಿಗೆ ಸೇರಿದ ಯಾವನೇ ವ್ಯಕ್ತಿಯನ್ನು ತೆಗೆದುಹಾಕಲು ರಾಜ್ಯ ಸರ್ಕಾರದ ಅಧಿಕಾರ:–** ರಾಜ್ಯ ಸರ್ಕಾರವು, ಅದು ಯೋಗ್ಯವಲ್ಲವೆಂದು ಭಾವಿಸಬಹುದಾದ ಯಾವನೇ ವ್ಯಕ್ತಿಯನ್ನು ಮಂಡಲಿಯ ಸೇವೆಯಿಂದ ತೆಗೆದು ಹಾಕಲು ಅಧಿಕಾರವನ್ನು ಹೊಂದಿರತಕ್ಕದ್ದು.

**16. ದಾಖಲೆಗಳು ಇತ್ಯಾದಿಗಳನ್ನು ತರಿಸಿಕೊಳ್ಳಲು ರಾಜ್ಯ ಸರ್ಕಾರ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯ ಅಧಿಕಾರ:–** ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು, ಮಂಡಲಿಯ ದಾಖಲೆಗಳನ್ನು ತರಿಸಿಕೊಳ್ಳಬಹುದು, ಅವುಗಳನ್ನು ಪರಿಶೀಲನೆ ಮಾಡಬಹುದು ಮತ್ತು ಮಂಡಲಿಯ ಕೆಲಸದ ಮೇಲ್ವಿಚಾರಣೆಯನ್ನು ಮಾಡಬಹುದು.

**17. ನಿಧಿಗೆ ಸಂದಾಯ ಮಾಡಬೇಕಾದ ಮೊತ್ತಗಳ ವಸೂಲಿಯ ವಿಧಾನ ಇತ್ಯಾದಿ:–** ಈ ಅಧಿನಿಯಮದ ಮೇರೆಗೆ ನಿಧಿಗೆ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ವಸೂಲಿಯ ಯಾವುದೇ ಇತರ ರೀತಿಗೆ ಬಾಧಕವಾಗದಂತೆ, ಮಂಡಲಿಯ ಪರವಾಗಿ ಭೂ ಕಂದಾಯದ ಬಾಕಿಗಳಂತೆ ವಸೂಲು ಮಾಡತಕ್ಕದ್ದು.

**17ಕ. ಪರಿಶೀಲಕನು ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅಡ್ಡಿಯನ್ನುಂಟು ಮಾಡಿದ್ದಕ್ಕಾಗಿ ಅಥವಾ ದಸ್ತಾವೇಜುಗಳು ಇತ್ಯಾದಿಗಳನ್ನು ಹಾಜರುಪಡಿಸಲು ತಪ್ಪುವುದಕ್ಕಾಗಿ ದಂಡನೆ:–** ಈ ಅಧಿನಿಯಮದ ಮೇರೆಗಿನ ಅವನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ಅವನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಪರಿಶೀಲಕನಿಗೆ ಉದ್ದೇಶಪೂರ್ವಕವಾಗಿ ಅಡ್ಡಿಯನ್ನುಂಟು ಮಾಡುವ ಅಥವಾ ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅನುಸರಣೆಯಲ್ಲಿ ಇಟ್ಟುಕೊಂಡು ಬಂದಿರುವ ಯಾವುದೇ ರಿಜಿಸ್ಟರುಗಳ ದಾಖಲೆಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಪರಿಶೀಲಕನು ತಗಾದೆ ಮಾಡಿದಾಗ ಪರಿಶೀಲನೆಗಾಗಿ ಅವುಗಳನ್ನು ಹಾಜರುಪಡಿಸಲು ತಪ್ಪುವ ಅಥವಾ ಯಾವುದೇ ಅಂಥ ದಸ್ತಾವೇಜುಗಳ ನಿಜ ಪ್ರತಿಗಳನ್ನು ತಗಾದೆ ಮಾಡಿದಾಗ ಅವನಿಗೆ ಒದಗಿಸಲು ತಪ್ಪುವ ಯಾವನೇ ವ್ಯಕ್ತಿಯು, ಅಪರಾಧವು ನಿರ್ಣಯವಾದ ಮೇಲೆ, ಮೊದಲ ಅಪರಾಧಕ್ಕಾಗಿ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ, ಅಥವಾ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ; ಮತ್ತು ಎರಡನೇ ಅಥವಾ ಆ ತರುವಾಯದ ಅಪರಾಧಗಳಿಗೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು:

ಪರಂತು, ನ್ಯಾಯಾಲಯದ ತೀರ್ಪಿನಲ್ಲಿ ತದ್ವಿರುದ್ಧವಾಗಿ ನಮೂದು ಮಾಡಬೇಕಾದ ವಿಶೇಷ ಮತ್ತು ಸಾಕಷ್ಟು ಕಾರಣಗಳಿಲ್ಲದಿರುವಲ್ಲಿ ಅಪರಾಧಿಯನ್ನು ಜುಲ್ಮಾನೆಯಿಂದ ಮಾತ್ರವೇ ಶಿಕ್ಷಿಸುವ ಯಾವುದೇ ಪ್ರಕರಣದಲ್ಲಿ ಜುಲ್ಮಾನೆಯ ಮೊಬಲಗು ಐವತ್ತು ರೂಪಾಯಿಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

**17ಖ. ಅಧಿನಿಯಮದ ಯಾವುದೇ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ:–** ಅಧಿನಿಯಮದ ಯಾವುದೇ ಉಪಬಂಧವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸುವ ಯಾವನೇ ವ್ಯಕ್ತಿಯ ಅಪರಾಧವು ನಿರ್ಣಯವಾದ ಮೇಲೆ ಮೊದಲ ಅಪರಾಧಕ್ಕಾಗಿ ಐದುನೂರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಮತ್ತು ಎರಡನೆಯ ಮತ್ತು ಆ ತರುವಾಯದ ಅಪರಾಧಗಳಿಗಾಗಿ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಅವೆರಡರಿಂದಲು ದಂಡಿತನಾಗತಕ್ಕದ್ದು.

**17ಗ. ಅಪರಾಧಗಳ ಸಂಜ್ಞೇಯತೆ:–** ಯಾವುದೇ ನ್ಯಾಯಾಲಯವು, ವೆಲ್‌ಫೇರ್ ಕಮೀಷನರನ ಪೂರ್ವ ಮಂಜೂರಾತಿಯನ್ನು ಪಡೆದು ಪರಿಶೀಲಕನು ದೂರನ್ನು ದಾಖಲು ಮಾಡಿದ ಹೊರತು ಯಾವ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**18. ಮಂಡಲಿಯನ್ನು ರದ್ದುಗೊಳಿಸುವುದು:–** (1) ಈ ಅಧಿನಿಯಮದ ಮೂಲಕ ಅದರ ಮೇರೆಗೆ ಮಂಡಲಿಗೆ ವಿಧಿಸಿದ ಯಾವುವೇ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅದು ತಪ್ಪಿದೆಯೆಂದು ಅಥವಾ ಅದರ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದೆಯೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಮಂಡಲಿಯನ್ನು ರದ್ದುಗೊಳಿಸಬಹುದು ಮತ್ತು ನಿಯಮಿಸಿದ ರೀತಿಯಲ್ಲಿ ಅದನ್ನು ಪುನಃ ರಚಿಸಬಹುದು.

ಪರಂತು, ಈ ಉಪ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ ರಾಜ್ಯ ಸರ್ಕಾರವು ಮಂಡಲಿಗೆ ಅದನ್ನು ಏಕೆ ರದ್ದುಗೊಳಿಸಬಾರದೆಂಬುದಕ್ಕೆ ಕಾರಣ ತೋರಿಸಲು, ಸೂಕ್ತ ಅವಕಾಶವನ್ನು ಕೊಡತಕ್ಕದ್ದು. ಮಂಡಲಿಯ ವಿವರಣೆಗಳು ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) ಮಂಡಲಿಯನ್ನು ರದ್ದುಗೊಳಿಸಿದ ತರುವಾಯ ಮತ್ತು ಅದನ್ನು ಪುನಃ ರಚಿಸುವವರೆಗೆ, ಈ ಅಧಿನಿಯಮದ ಮೇರೆಗಿನ ಮಂಡಲಿಯ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ರಾಜ್ಯ

ಸರ್ಕಾರವು ಈ ಉದ್ದೇಶಕ್ಕಾಗಿ ನೇಮಕ ಮಾಡಬಹುದಾದಂಥ ಅಧಿಕಾರಿಯು ಚಲಾಯಿಸತಕ್ಕದ್ದು ಅಥವಾ ನೆರವೇರಿಸತಕ್ಕದ್ದು.

**19. ನಿಯಮಗಳು.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಅದರ ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಅಂಥ ನಿಯಮಗಳನ್ನು ರಚಿಸಬಹುದು, ಎಂದರೆ;–

(ಕ) 3ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಮೊತ್ತಗಳ ಸಂಗ್ರಹಣೆಗಾಗಿನ ಏಜನ್ಸಿ ಮತ್ತು ಅವುಗಳ ಸಂಗ್ರಹಣೆಯ ರೀತಿ ಮತ್ತು ಯಾವ ಅವಧಿಯೊಳಗೆ ಅದನ್ನು ನಿಧಿಗೆ ಜಮೆ ಮಾಡಬೇಕೋ ಆ ಅವಧಿ;

(ಖ) 3ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ನಿಧಿಯ ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರತಕ್ಕ ಮತ್ತು ಅದರ ಲೆಕ್ಕ ಪರಿಶೋಧನೆಯನ್ನು ಮಾಡತಕ್ಕಂಥ ರೀತಿ;

(ಗ) 8ನೇ ಪ್ರಕರಣದ ಮೇರೆಗೆ ನಿಧಿಯಿಂದ ಅನುದಾನಗಳನ್ನು ಮಾಡುವುದಕ್ಕಾಗಿನ ಪ್ರಕ್ರಿಯೆ;

(ಘ) ಆ ನಿಧಿಯನ್ನು ನಿರ್ವಹಿಸುವಲ್ಲಿ ವಹಿಸಿದ ವೆಚ್ಚವನ್ನು ಭರಿಸುವುದಕ್ಕಾಗಿನ ಪ್ರಕ್ರಿಯೆ;

(ಙ) ಮಂಡಲಿಯಲ್ಲಿರಬೇಕಾದ ನಿಯೋಜಕರ ಮತ್ತು ನಿಯೋಜಿತರ, ಪ್ರತಿ ನಿಧಿಗಳ, ಸ್ವತಂತ್ರ ಸದಸ್ಯರ ಮತ್ತು ಮಹಿಳಾ ಪ್ರತಿನಿಧಿಗಳ ಸಂಖ್ಯೆ ಮತ್ತು ಅವರಿಗೆ 4ನೇ ಪ್ರಕರಣದ ಮೇರೆಗೆ, ಸಂದಾಯ ಮಾಡಬೇಕಾದ ಭತ್ಯಗಳು, ಯಾವುದಾದರೂ ಇದ್ದರೆ ಅವು;

(ಚ) ಮಂಡಲಿಯು ಅದರ ವ್ಯವಹಾರಗಳನ್ನು ನಡೆಸತಕ್ಕಂಥ ರೀತಿ;

(ಛ) ಪರಿಶೀಲಕರ ಕರ್ತವ್ಯಗಳು ಮತ್ತು ಅಧಿಕಾರಗಳು ಮತ್ತು ಈ ಅಧಿನಿಯಮದ ಮೇರೆಗೆ ನೇಮಕಗೊಂಡ ವೆಲ್‌ಫೇರ್ ಕಮೀಷನರ್ ಮತ್ತು ಪರಿಶೀಲಕರು ಮತ್ತು ಇತರ ಸಿಬ್ಬಂದಿಯ ಸೇವಾ ಷರತ್ತುಗಳು;

(ಜ) ಮಂಡಲಿಯ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ವೆಲ್‌ಫೇರ್ ಕಮೀಷನರ್‌ರವರಿಗೆ ಪ್ರತ್ಯಾಯೋಜಿಸುವುದು ಮತ್ತು ಯಾವ ಷರತ್ತುಗಳು ಮತ್ತು ಪರಿಮಿತಿಗಳಿಗೊಳಪಟ್ಟು ಆ ಅಧಿಕಾರಗಳನ್ನು ಚಲಾಯಿಸಬಹುದೋ, ಅಥವಾ ಪ್ರಕಾರ್ಯಗಳನ್ನು ನೆರವೇರಿಸಬಹುದೋ ಆ ಷರತ್ತುಗಳು ಮತ್ತು ಪರಿಮಿತಿಗಳು;

(ಝ) ಸಿಬ್ಬಂದಿ ಮತ್ತು ಇತರ ಆಡಳಿತಾತ್ಮಕ ಕ್ರಮಗಳ ಬಗ್ಗೆ ಮಂಡಲಿಯು ನಿಧಿಯ ವಾರ್ಷಿಕ ವೆಚ್ಚ ಮಾಡಲಾಗದಂಥ ಆದಾಯದ ಯಾವ ಶೇಕಡಾವಾರನ್ನು ಮೀರಿ ಖರ್ಚು ಮಾಡಬಾರದೋ ಆ ಶೇಕಡಾವಾರು;

(ಞ) ಈ ಅಧಿನಿಯಮದ ಮೇರೆಗೆ ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳು;

(ಟ) ನಿಧಿಯ ಜಮೆ ಮತ್ತು ವೆಚ್ಚದ ವಿವರಪತ್ರ ಮತ್ತು ಲೆಕ್ಕ ಪತ್ರಗಳ ವಿವರ ಪತ್ರದೊಂದಿಗೆ ನಿಧಿಯಿಂದ ಹಣ ಒದಗಿಸಿದ ಚಟುವಟಿಕೆಯ ಬಗ್ಗೆ ವರದಿಯ ಪ್ರಕಟಣೆ;

(ಠ) ಮಂಡಲಿಯು ಯಾವ ಷರತ್ತಿಗೊಳಪಟ್ಟು ಸ್ಥಿರ ಮತ್ತು ಚರ ಸ್ವತ್ತನ್ನು ವಿಲೇ ಮಾಡಬಹುದೋ ಅಥವಾ ಕರಾರನ್ನು ಮಾಡಿಕೊಳ್ಳಬಹುದೋ ಆ ಷರತ್ತು;

(ಡ) ಈ ಅಧಿನಿಯಮದ ಮೇರೆಗೆ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ;

(3) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗಿರುವಂತೆ ಮಾಡಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ಆ ನಿಯಮವನ್ನು ರಚಿಸಿದ್ದಕ್ಕಾಗಿನ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇಟ್ಟು ವಿವರ ಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕುದು. 23ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ

ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**20. ಮಂಡಲಿಯ ಸದಸ್ಯರು, ವೆಲ್‌ಫೇರ್ ಕಮೀಷನರನು, ಪರಿಶೀಲಕರು ಮತ್ತು ಮಂಡಲಿಯ ಎಲ್ಲ ಅಧಿಕಾರಿಗಳು ಹಾಗೂ ನೌಕರರು ಲೋಕ ನೌಕರರಾಗಿರತಕ್ಕದ್ದು:–** ಮಂಡಲಿಯ ಸದಸ್ಯರು, ವೆಲ್‌ಫೇರ್ ಕಮೀಷನರನು, ಪರಿಶೀಲಕರು ಮತ್ತು ಮಂಡಲಿಯ ಎಲ್ಲ ಅಧಿಕಾರಿಗಳು ಮತ್ತು ನೌಕರರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

**21. ಸದ್ಭಾವನೆಯಿಂದ ಕಾರ್ಯನಿರ್ವಹಿಸುವ ವ್ಯಕ್ತಿಗಳಿಗೆ ಸಂರಕ್ಷಣೆ:–** ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಈ ಅಧಿನಿಯಮದ ಮೇರೆಗೆ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ಮಂಡಲಿ ಅಥವಾ ಅಂಥ ಯಾವನೇ ವ್ಯಕ್ತಿಯ ವಿರುದ್ಧ ಹೂಡತಕ್ಕದ್ದಲ್ಲ.

**22. ವಿನಾಯಿತಿ.–** ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧದಿಂದ ಕಾರ್ಯಸಂಸ್ಥೆಗಳ ಯಾವುದೇ ವರ್ಗಕ್ಕೆ ವಿನಾಯಿತಿ ಕೊಡಬಹುದು.

**23. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದ್ದು:–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮ ಮತ್ತು 22ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು, ಮತ್ತು ಅದನ್ನು ಹಾಗೆ ಇಡಲಾದಂಥ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಅಥವಾ ಆ ಅಧಿಸೂಚನೆಯನ್ನು ಹೊರಡಿಸಬಾರದೆಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಸಂದರ್ಭಾನುಸಾರ ಆ ನಿಯಮವು ಅಥವಾ ಅಧಿಸೂಚನೆಯು, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**24. ಸರ್ಕಾರಿ ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಮಂಡಲಿಗೆ ವರ್ಗಾಯಿಸಬಹುದು:–** (1) ರಾಜ್ಯ ಸರ್ಕಾರದ ಕಾರ್ಮಿಕ ಕಲ್ಯಾಣ ಕೇಂದ್ರಗಳ ನಿಯಂತ್ರಣ ಮತ್ತು ವ್ಯವಸ್ಥಾಪನೆಯ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಮಂಡಲಿಗೆ ವರ್ಗಾಯಿತವಾಗತಕ್ಕದ್ದು ಮತ್ತು ಆ ತರುವಾಯ, ಅಂಥ ಕೇಂದ್ರಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರದ ಎಲ್ಲ ಸ್ವತ್ತುಗಳು, ಮತ್ತು ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಮಂಡಲಿಗೆ ವರ್ಗಾಯಿತವಾಗತಕ್ಕದ್ದು, ಮತ್ತು ಅದರಲ್ಲಿ ನಿಹಿತವಾಗತಕ್ಕುದು ಅಥವಾ ಅದಕ್ಕೆ ಪ್ರಾಪ್ತವಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸದರಿ ಯಾವುದೇ ಕೇಂದ್ರದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ಪೂರ್ಣವಾಗಿ ಅಥವಾ ಮುಖ್ಯವಾಗಿ ನಿಯೋಜಿತರಾಗಿರುವ ರಾಜ್ಯ ಸರ್ಕಾರದ ಪ್ರತಿಯೊಬ್ಬ ನಿಯೋಜಿತನು, ಸದರಿ ದಿನಾಂಕದಿಂದ ಮಂಡಲಿಯ ನಿಯೋಜಿತನಾಗತಕ್ಕದ್ದು ಮತ್ತು ಸದರಿ ಕೇಂದ್ರದ ವರ್ಗಾವಣೆಯನ್ನು ಮಾಡಿಲ್ಲದಿದ್ದರೆ ಅದನ್ನು ಧಾರಣ ಮಾಡಿರುತ್ತಿದ್ದಂಥವೇ ಅವಧಿಗೆ ಅದೇ ಪರಿಶ್ರಮ ಧನ ಮತ್ತು ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ

ಮತ್ತು ಪಿಂಚಣಿ ಮತ್ತು ಉಪದಾನ ಹಾಗೂ ಇತರ ವಿಷಯಗಳ ಬಗ್ಗೆ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳನ್ನು ಮಂಡಲಿಯ ಅಧೀನದಲ್ಲಿ ಪದಧಾರಣ ಮಾಡತಕ್ಕದ್ದು ಮತ್ತು ಮಂಡಲಿಯ ಅಧೀನದಲ್ಲಿ ಅವನ ನಿಯೋಜನೆಯನ್ನು ಕೊನೆಗೊಳಿಸಿದ ಹೊರತು ಮತ್ತು ಅಲ್ಲಿಯವರೆಗೆ ಹಾಗೆ ಮಾಡುವುದು ಅಥವಾ ಅವನ ಪರಿಶ್ರಮ ಧನ ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಮಂಡಲಿಯು ಕ್ರಮಬದ್ಧವಾಗಿ ಬದಲಾಯಿಸುವವರೆಗೆ ಹಾಗೆ ಮಾಡುವುದು ಮುಂದುವರಿಯತಕ್ಕದ್ದು:

ಪರಂತು, ಯಾವನೇ ಅಂಥ ನಿಯೋಜಿತನ ಪರಿಶ್ರಮ ಧನ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅಲ್ಲದೆ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಾಸಗೊಳಿಸತಕ್ಕದ್ದಲ್ಲ.

**25. ಕೇಂದ್ರಾಧಿನಿಯಮ 1936ರ 4ರ 8ನೇ ಪ್ರಕರಣದ ತಿದ್ದುಪಡಿ.–** ಮಜೂರಿಗಳ ಸಂದಾಯ ಅಧಿನಿಯಮ 1936ರ ಕೇಂದ್ರಾಧಿನಿಯಮ, 1936ರ (4ರ) 8ನೇ ಪ್ರಕರಣದಲ್ಲಿ (8)ನೇ ಉಪ ಪ್ರಕರಣದಲ್ಲಿ, ವಿವರಣೆಗೆ ಮುಂಚೆ ಈ ಕೆಳಕಂಡದ್ದನ್ನು ಸೇರಿಸತಕ್ಕುದು, ಎಂದರೆ.–

ಆದರೆ ಕರ್ನಾಟಕ ಕಾರ್ಮಿಕ ಕಲ್ಯಾಣನಿಧಿ ಅಧಿನಿಯಮ, 1965 ಇದು ಅನ್ವಯವಾಗುವಂಥ ಯಾವುದೇ ಕಾರ್ಖಾನೆ ಅಥವಾ ಕಾರ್ಯ ಸಂಸ್ಥೆಯ ಸಂದರ್ಭದಲ್ಲಿ ಎಲ್ಲ ಅಂಥ ವಸೂಲಿಗಳನ್ನು ಸದರಿ ಅಧಿನಿಯಮದ ಮೇರೆಗೆ ರಚಿಸಿದ ನಿಧಿಗೆ ಸಂದಾಯ ಮಾಡತಕ್ಕದ್ದು.

**26. ನಿರಸನ ಮತ್ತು ಉಳಿಸುವಿಕೆಗಳು.–** (1) ಬೆಳಗಾಂವಿ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬರುವ ದಿನಾಂಕದಿಂದ.–

(ಕ) ಬೆಳಗಾಂವಿ ಪ್ರದೇಶದಲ್ಲಿ ಜಾರಿಯಲ್ಲಿರುವ ಮುಂಬಯಿ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1953 (ಮುಂಬಯಿ ಅಧಿನಿಯಮ, 1953ರ ಸಂಖ್ಯೆ 40) ಇದು ನಿರಸನಗೊಳ್ಳತಕ್ಕದ್ದು;

(ಖ) ಅಂತರರಾಜ್ಯ ನಿಗಮಗಳ ಅಧಿನಿಯಮ, 1957ರ (ಕೇಂದ್ರಾಧಿನಿಯಮ, 1957ರ ಸಂಖ್ಯೆ 38) ಅಡಿಯಲ್ಲಿ, ಕೇಂದ್ರ ಸರ್ಕಾರವು ಮಾಡಿದ ಮುಂಬಯಿ ಕಾರ್ಮಿಕ ಕಲ್ಯಾಣ ಮಂಡಲಿ (ಪುನರಚನೆ) ಆದೇಶ, 1959 ಇದರಲ್ಲಿ ಪರಿಭಾಷಿಸಿದಂತೆ, ಹೊಸ ಮಂಡಲಿಯಲ್ಲಿ ನಿಹಿತವಾಗಿರುವ ಎಲ್ಲ ಸ್ವತ್ತುಗಳು, ನಿಧಿ ಮತ್ತು ಅದು ವಸೂಲ್ಮಾಡಬೇಕಾದ ಬಾಕಿಗಳು ಈ ಅಧಿನಿಯಮದ ಮೇರೆಗೆ ರಚಿಸಲಾದ ಮಂಡಲಿಯಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರಿಂದ ವಸೂಲಿಯವಾಗತಕ್ಕದ್ದು.

(ಗ) ಸದರಿ ಹೊಸ ಮಂಡಲಿಯ ವಿರುದ್ಧ ಜಾರಿಗೊಳಿಸಬಹುದಾಗಿದ್ದಂಥ ಎಲ್ಲ ಹೊಣೆಗಾರಿಕೆಗಳು ಈ ಅಧಿನಿಯಮದ ಮೇರೆಗೆ ರಚಿಸಲಾದ ಮಂಡಲಿಯ ವಿರುದ್ಧ ಜಾರಿಗೊಳಿಸಬಹುದಾಗಿರತಕ್ಕದ್ದು;

(ಘ) ಸದರಿ ಹೊಸ ಮಂಡಲಿಯ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಸೇವೆ ಸಲ್ಲಿಸುತ್ತಿರುವ ಎಲ್ಲ ನಿಯೋಜಿತರು ಈ ಅಧಿನಿಯಮದ ಮೇರೆಗೆ ರಚಿತವಾದ ಮಂಡಲಿಯ ನಿಯೋಜಿತರಾಗತಕ್ಕದ್ದು; ಮತ್ತು

(2) (1)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1998ರ (ಕರ್ನಾಟಕ ಅಧಿನಿಯಮ, 1998ರ 3) 6ನೇ ಪ್ರಕರಣದ ಉಪಬಂಧಗಳು, ಮುಂಬಯಿ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1953ರ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕುದು ಮತ್ತು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 8 ಮತ್ತು 24ನೇ ಪ್ರಕರಣಗಳು ಸದರಿ ಮುಂಬಯಿ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1953 ಈ ಅಧಿನಿಯಮದ ಮೂಲಕ ನಿರಸನಗೊಳಿಸಲಾಗಿದ್ದಿದ್ದರೆ ಮತ್ತು ಪುನರ್ ಅಧಿನಿಯಮಿತಗೊಳಿಸದಿದ್ದರೆ ಹೇಗೋ ಹಾಗೇ ಅನ್ವಯವಾಗತಕ್ಕದ್ದು.

## ಕರ್ನಾಟಕ ಅಧಿನಿಯಮ, 1976ರ ಸಂಖ್ಯೆ 73

(1976ರ ಡಿಸೆಂಬರ್ ನಾಲ್ಕನೇ ದಿವಸದಂದು ಕರ್ನಾಟಕ ವಿಶೇಷ ರಾಜಪತ್ರದಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 1976

(1976ರ ಡಿಸೆಂಬರ್ ಮೊದಲನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಕಾರ್ಮಿಕ ಕಲ್ಯಾಣ ಅಧಿನಿಯಮ, 1965 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ, 1965ರ ಸಂಖ್ಯೆ 15) ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು, 1976ರ ಅಕ್ಟೋಬರ್ ಎಂಟನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2 ರಿಂದ 5ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

6. ಕರ್ನಾಟಕ ಅಧ್ಯಾದೇಶ 1976, ಸಂಖ್ಯೆ 26ರ ನಿರಸನ.– ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧ್ಯಾದೇಶ, 1976 (1976ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 26) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಈ ಮೂಲ ಅಧಿನಿಯಮದ ಮೇರೆಗೆ ಮಾಡಿದ ಕಾರ್ಯ ಅಥವಾ ಕೈಗೊಂಡ ಕ್ರಮವೆಂಬುದಾಗಿ ಭಾವಿಸತಕ್ಕದ್ದು.

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968

**ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968**


| | | |
|---|---|---|
| 1 | ಚಿಕ್ಕ ಹೆಸರು ಮತ್ತು ಪ್ರಾರಂಭ | 18 |
| 2 | ಪರಿಭಾಷೆಗಳು | 18 |
| 3 | ನಿಯೋಜಕನಿಂದ ಜುಲ್ಮಾನೆಗಳು ಮತ್ತು ಸಂದಾಯ ಮಾಡಿಲ್ಲದ ಸಂಚಯಗಳ ಸಂದಾಯ | 18 |
| 3ಕ | ನಿಯೋಜಕನಿಂದ ವಂತಿಗೆಯ ಸಂದಾಯ ಬಗ್ಗೆ ವಿವರಣ ಪತ್ರವನ್ನು ಒಪ್ಪಿಸುವುದು | 18 |
| 4 | ಜುಲ್ಮಾನೆಗಳನ್ನು ಮತ್ತು ಸಂದಾಯ ಮಾಡಿಲ್ಲದ ಸಂಚಯಗಳ ಸಂದಾಯಕ್ಕಾಗಿ ವೆಲ್‌ಫೇರ್ ಕಮೀಷನರನಿಂದ ನೋಟೀಸುಗಳು | 19 |
| 5 | ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ಪರಿಶೋಧನೆ | 19 |
| 6 | ವೆಚ್ಚವನ್ನು ಭರಿಸುವುದಕ್ಕಾಗಿ ಪ್ರಕ್ರಿಯೆ | 20 |
| 7 | ಹೆಚ್ಚುವರಿ ವೆಚ್ಚ | 20 |
| 8 | ನಿಧಿಯಿಂದ ಅನುದಾನಕ್ಕಾಗಿ ಅರ್ಜಿ | 21 |
| 9 | ಸಂದಾಯದ ವಿಧಾನ | 21 |
| 10 | ಮಂಡಲಿಯ ರಚನೆ | 21 |
| 11 | ಮಂಡಲಿಯ ಪುನರ್ ರಚನೆ | 21 |
| 12 | ಅಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು | 21 |
| 13 | ಮಂಡಲಿಯ ಸಭೆಗಳು | 21 |
| 14 | ಕೋರಂ | 22 |
| 15 | ಅಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕುದು | 22 |
| 16 | ಸಭೆಯನ್ನು ಮುಂದಕ್ಕೆ ಹಾಕುವುದು | 22 |
| 17 | ಎಲ್ಲಾ ಪ್ರಶ್ನೆಗಳನ್ನು ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು | 22 |
| 18 | ಮತಗಳನ್ನು ಚಲಾಯಿಸುವ ವಿಧಾನ | 22 |
| 19 | ಸಭೆಯ ನಡವಳಿಕೆಗಳು | 22 |
| 20 | ಸಿಬ್ಬಂದಿ ಇತ್ಯಾದಿಗಳ ಮೇಲಿನ ವೆಚ್ಚದ ಪರಿಮಿತಿ | 22 |
| 21 | ಮಂಡಲಿಯ ಸಿಬ್ಬಂದಿಯ ಸೇವಾ ಷರತ್ತುಗಳು | 22 |
| 22 | ವೆಲ್‌ಫೇರ್ ಕಮೀಷನರ್ | 23 |
| 23 | ವೆಲ್‌ಫೇರ್ ಕಮೀಷನರನಿಗೆ ಅಧಿಕಾರಗಳ ಪ್ರತ್ಯಾಯೋಜನೆ | 23 |
| 24 | ಪರಿಶೀಲಕರ ಕರ್ತವ್ಯಗಳು | 24 |
| 25 | ಮಂಡಲಿಯ ಸಿಬ್ಬಂದಿಯ ವೆಚ್ಚಗಳು ಮತ್ತು ಇತರ ಆಡಳಿತಾತ್ಮಕ ವೆಚ್ಚಗಳು | 24 |
| 26 | ಸ್ವತ್ತಿನ ವಿಲೇವಾರಿ | 24 |
| 27 | ಕರಾರುಗಳನ್ನು ಬರೆದುಕೊಡುವುದಕ್ಕಾಗಿ ಪ್ರಕ್ರಿಯೆ | 24 |
| 28 | ಮಂಡಲಿಯ ವಾರ್ಷಿಕ ವರದಿಯ ಪ್ರಕಟಣೆ | 25 |
| 29 | ಕೆಲವು ನಿಯೋಜಕರು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು | 25 |

# ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968

ಅಧಿಸೂಚನೆ ಸಂಖ್ಯೆ: ಎಫ್‌ಸಿಎಲ್ 274 ಎಲ್‌ಎಲ್‌ಇ 65, ದಿನಾಂಕ 30ನೇ ಜುಲೈ 1968

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ (ಕರ್ನಾಟಕ ಅಧಿನಿಯಮ 1965ರ 15) 19ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ; ಇವುಗಳ ಕರಡನ್ನು ಆ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ 1966ರ ಆಗಸ್ಟ್ 23ನೇ ದಿನಾಂಕ ಅಧಿಸೂಚನೆ ಸಂಖ್ಯೆ: ಎಲ್‌ಎಂಎ 274 ಎಲ್‌ಎಲ್‌ಇ 65ರಲ್ಲಿ 1966ರ ಸೆಪ್ಟೆಂಬರ್ 8ನೇ ದಿನಾಂಕ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ; ಎಂದರೆ:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** ಈ ನಿಯಮಗಳನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು, 1968 ಎಂದು ಕರೆಯತಕ್ಕದ್ದು.

(2) ಇವು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ಅಧಿನಿಯಮ"** ಎಂದರೆ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ 1966.

(2) **"ನಮೂನೆ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿರುವ ನಮೂನೆ;

(3) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ.

**3. ನಿಯೋಜಕನಿಂದ ಜುಲ್ಮಾನೆಗಳು ಮತ್ತು ಸಂದಾಯ ಮಾಡಿಲ್ಲದ ಸಂಚಯಗಳ ಸಂದಾಯ.–** (1) ಅಧಿನಿಯಮವು ಜಾರಿಗೆ ಬಂದಿರುವಂಥ ಯಾವುದೇ ಪ್ರದೇಶದಲ್ಲಿನ ಪ್ರತಿಯೊಬ್ಬ ನಿಯೋಜಕನು ಹಾಗೆ ಜಾರಿಗೆ ಬಂದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ವೆಲ್‌ಫೇರ್ ಕಮೀಷನರಿಗೆ ಚೆಕ್ಕಿನ ಮೂಲಕ, ಮನಿ ಆರ್ಡರ್ ಮೂಲಕ ಅಥವಾ ನಗದು ಮೂಲಕ ಸದರಿ ದಿನಾಂಕಕ್ಕೆ ಮುಂಚೆ ನಿಯೋಜಿತನಿಂದ ವಸೂಲು ಮಾಡಿದ ಎಲ್ಲಾ ಜುಲ್ಮಾನೆಗಳನ್ನು ಸಂದಾಯ ಮಾಡತಕ್ಕದ್ದು ಮತ್ತು ಅದೇ ರೀತಿಯಲ್ಲಿ ಸದರಿ ದಿನಾಂಕದಂದು ಅಂಥ ನಿಯೋಜಕನು ಹೊಂದಿದ್ದ ಎಲ್ಲಾ ಸಂದಾಯ ಮಾಡಿಲ್ಲದ ಸಂಚಯಗಳನ್ನು ವರ್ಗಾವಣೆ ಮಾಡತಕ್ಕದ್ದು.

(2) ನಿಯೋಜಕನು, (1)ನೇ ಉಪ ನಿಯಮದ ಮೇರೆಗಿನ ಸಂದಾಯ ಅಥವಾ ವರ್ಗಾವಣೆಯೊಂದಿಗೆ ಮಾಡಿದ ಸಂದಾಯದ ಪೂರ್ಣ ವಿವರಗಳನ್ನು ಒದಗಿಸಿ ಒಂದು ವಿವರಣ ಪತ್ರವನ್ನು ವೆಲ್‌ಫೇರ್ ಕಮೀಷನರಿಗೆ ಸಲ್ಲಿಸತಕ್ಕದ್ದು.

(3) ಅಧಿನಿಯಮವು ಜಾರಿಗೆ ಬಂದ ತರುವಾಯ ನಿಯೋಜಿತರಿಂದ ವಸೂಲು ಮಾಡಿದ ಎಲ್ಲಾ ಜುಲ್ಮಾನೆಗಳು ಮತ್ತು ಸಂದಾಯ ಮಾಡಿಲ್ಲದ ಒದಗಿ ಬಂದ ಎಲ್ಲಾ ಸಂಚಯಗಳನ್ನು (1) ಹಾಗೂ (2)ನೇ ಉಪ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ನಿಯೋಜಕನು ಏಪ್ರಿಲ್ 15, ಜುಲೈ 15, ಅಕ್ಟೋಬರ್ 15ರಂದು ಅಥವಾ ಅದಕ್ಕೆ ಮುಂಚೆ ಪ್ರತಿ ಮೂರು ತಿಂಗಳಿಗೊಮ್ಮೆ ವೆಲ್‌ಫೇರ್ ಕಮೀಷನರಿಗೆ ಸಂದಾಯ ಮಾಡತಕ್ಕದ್ದು.

**3ಕ. ನಿಯೋಜಕನಿಂದ ವಂತಿಗೆಯ ಸಂದಾಯದ ಬಗ್ಗೆ ವಿವರಣ ಪತ್ರವನ್ನು ಒಪ್ಪಿಸುವುದು.–**(1) ಪ್ರತಿಯೊಬ್ಬ ನಿಯೋಜಕನು, ವೆಲ್‌ಫೇರ್ ಕಮೀಷನರನಿಗೆ ಪ್ರತಿ ವರ್ಷದ ಜನವರಿ 15ರಂದು ಅಥವಾ ಅದಕ್ಕೆ ಮುಂಚೆ ನಿಯೋಜಕರು ಮತ್ತು ನಿಯೋಜಕರು ಸಂದಾಯ ಮಾಡಿದ ವಂತಿಗೆಗಳ ವಿವರ ಪತ್ರವನ್ನು (ಎಫ್) ನಮೂನೆಯಲ್ಲಿ ಒಪ್ಪಿಸತಕ್ಕದ್ದು.

(2) ವೆಲ್‌ಫೇರ್ ಕಮೀಷನರನು, ರಾಜ್ಯ ಸರ್ಕಾರಕ್ಕೆ ಪ್ರತಿ ವರ್ಷದ ಫೆಬ್ರವರಿ 15ರಂದು ಅಥವಾ ಅದಕ್ಕೆ ಮುಂಚೆ ಹಿಂದಿನ ವರ್ಷದಲ್ಲಿ ಅವನು ಸ್ವೀಕರಿಸಿದ ನಿಯೋಜಕರು ಮತ್ತು ನಿಯೋಜಿತರು ಕೊಟ್ಟ ವಂತಿಗೆಗಳ ವಿವರಣ ಪತ್ರವನ್ನು ನಮೂನೆ 'ಜ'ದಲ್ಲಿ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**4. ಜುಲ್ಮಾನೆಗಳು ಮತ್ತು ಸಂದಾಯ ಮಾಡಿಲ್ಲದ ಸಂಚಯಗಳ ಸಂದಾಯಕ್ಕಾಗಿ ವೆಲ್‌ಫೇರ್ ಕಮೀಷನರನಿಂದ ನೋಟೀಸುಗಳು.–** (1) ವೆಲ್‌ಫೇರ್ ಕಮೀಷನರನು ಅವನು ಯುಕ್ತವೆಂದು ಭಾವಿಸುವಂಥ ವಿಚಾರಣೆಗಳನ್ನು ಮಾಡಿದ ತರುವಾಯ ಮತ್ತು ಅವಶ್ಯವಿದ್ದರೆ, ಪರಿಶೀಲಕನಿಂದ ವರದಿಯನ್ನು ತರಿಸಿಕೊಂಡ ತರುವಾಯ, 3ನೇ ನಿಯಮದ ಮೂಲಕ ಅಗತ್ಯಪಡಿಸಿದಂತೆ ನಿಯೋಜಕನು ಸಂದಾಯ ಮಾಡಿಲ್ಲದಂಥ ನಿಯೋಜಿತರಿಂದ ವಸೂಲು ಮಾಡಿದ ಎಲ್ಲಾ ಜುಲ್ಮಾನೆಗಳನ್ನು ಅಥವಾ ಯಾವುದೇ ಭಾಗವನ್ನು ಅಥವಾ ನಿಯೋಜಕನು ಸಂದಾಯ ಮಾಡಿಲ್ಲದ ಅವನು ಹೊಂದಿರುವ ಸಂಚಯಗಳನ್ನು ಸಂದಾಯ ಮಾಡಲು ಯಾವನೇ ನಿಯೋಜಕನಿಗೆ ನೋಟೀಸನ್ನು ಜಾರಿ ಮಾಡಬಹುದು.

(2) ನಿಯೋಜಕನು, ನೋಟೀಸನ್ನು ಸ್ವೀಕರಿಸಿದ ಹದಿನಾಲ್ಕು ದಿವಸಗಳೊಳಗೆ ಅದನ್ನು ಪಾಲಿಸತಕ್ಕದು.

(3) ಸಂದಾಯ ಮಾಡಿಲ್ಲದ ಸಂಚಯಗಳಿಗೆ ಕ್ಲೇಮುಗಳನ್ನು ಆಹ್ವಾನಿಸುವ ನೋಟೀಸಿನ ವಿವರಗಳು ನಮೂನೆ 'ಗ'ದಲ್ಲಿರತಕ್ಕದು.

**5. ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ಪರಿಶೋಧನೆ.–** (1) ಮಂಡಲಿಯ ಲೆಕ್ಕ ಪತ್ರಾಧಿಕಾರಿಯು ನಿಧಿಯ ಲೆಕ್ಕಪತ್ರಗಳನ್ನು ತಯಾರಿಸತಕ್ಕದು ಮತ್ತು ಇಟ್ಟುಕೊಂಡು ಬರತಕ್ಕದು ಮತ್ತು ಅವುಗಳನ್ನು ವರ್ಷಕ್ಕೊಮ್ಮೆ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನ್ನು ಪರಿಶೋಧಿಸತಕ್ಕದು. ವೆಲ್‌ಫೇರ್ ಕಮೀಷನರನು ಲೆಕ್ಕಪರಿಶೋಧನಾ ಟಿಪ್ಪಣಿಯನ್ನು ವಿಲೆ ಮಾಡುವುದಕ್ಕಾಗಿ ಜವಾಬ್ದಾರನಾಗಿರತಕ್ಕದು,

(2) ಮಂಡಲಿಯ ಸಂಪೂರ್ಣ ಮತ್ತು ನಿಷ್ಕೃಷ್ಟ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರತಕ್ಕದು ಮತ್ತು ಈ ಬಗ್ಗೆ ಪ್ರಕ್ರಿಯೆಯು, ಕರ್ನಾಟಕ ಹಣಕಾಸು ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿರುವಂತೆಯೇ ಇರತಕ್ಕದು. ಲೆಕ್ಕ ಪತ್ರಗಳನ್ನು ಪ್ರತಿ ವರ್ಷ ಮಾರ್ಚ್ 31ರಂದು ಸರಿದೂಗಿಸತಕ್ಕದು;

ಪರಂತು, ಮಂಡಲಿಯು ಮಾಡಿಕೊಂಡ ಅರ್ಜಿಯ ಮೇಲೆ ರಾಜ್ಯ ಸರ್ಕಾರವು ಸದರಿ ದಿನಾಂಕವನ್ನು ಮೂವತ್ತು ದಿವಸಗಳ ಮೀರದ ಅವಧಿಯಿಂದ ವಿಸ್ತರಿಸಬಹುದು.

(3) ವಾರ್ಷಿಕ ಲೆಕ್ಕಪತ್ರಗಳನ್ನು ವಿವರಿಸತಕ್ಕದು ಮತ್ತು ಯಾವ ಹಣಕಾಸು ವರ್ಷಕ್ಕೆ ಅವು ಸಂಬಂಧಪಡುವವೋ ಆ ಹಣಕಾಸು ವರ್ಷವು ಮುಕ್ತಾಯವಾದ ತರುವಾಯ ಬರುವ ಪ್ರತಿ ಜೂನ್ 15ರಂದು ಅಥವಾ ಅದಕ್ಕೆ ಮುಂಚೆ ಪರಿಶೀಲನೆಗಾಗಿ, ರಾಜ್ಯ ಲೆಕ್ಕ ಪತ್ರಗಳ ಕಂಟ್ರೋಲರನ ಮುಂದೆ ಅಥವಾ ರಾಜ್ಯ ಲೆಕ್ಕ ಪತ್ರಗಳ ಕಂಟ್ರೋಲರನು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದು;

ಪರಂತು, ಮಂಡಲಿಯು ಮಾಡಿಕೊಂಡ ಅರ್ಜಿಯ ಮೇಲೆ ರಾಜ್ಯ ಸರ್ಕಾರವು ಸದರಿ ದಿನಾಂಕವನ್ನು ಮೂವತ್ತು ದಿವಸಗಳನ್ನು ಮೀರದ ಅವಧಿಯಿಂದ ವಿಸ್ತರಿಸಬಹುದು.

(4) ಲೆಕ್ಕ ಪರಿಶೋಧನ ವರದಿಯ ಸಹಿತ ವಾರ್ಷಿಕ ಲೆಕ್ಕ ಪತ್ರಗಳನ್ನು ಮಂಡಲಿಯ ಸಾಮಾನ್ಯ ಮೊಹರನ್ನು ಹಾಕುವ ಮೂಲಕ ಅಧಿಪ್ರಮಾಣಿಸತಕ್ಕದು ಮತ್ತು ಅವುಗಳ ನಾಲ್ಕು ಪ್ರತಿಗಳನ್ನು, ಅದು ಯಾವ ವರ್ಷಕ್ಕೆ ಸಂಬಂಧಪಟ್ಟಿದೆಯೋ ಆ ವರ್ಷದ ಮುಂದೆ ಬರುವ ನವೆಂಬರ್ ಒಂದನ್ನು ಮೀರದಂತೆ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದು.

(5) ಮಂಡಲಿಯ ಲೆಕ್ಕ ಪತ್ರಗಳ ವಾರ್ಷಿಕ ಲೆಕ್ಕಪರಿಶೋಧನೆಯನ್ನು ರಾಜ್ಯ ಲೆಕ್ಕ ಪತ್ರಗಳ ಕಂಟ್ರೋಲರನು ನಡೆಸತಕ್ಕದು. ಈ ನಿಯಮಗಳಿಗನುಸಾರವಾಗಿ ನೇಮಕಗೊಂಡ ಲೆಕ್ಕ ಪರಿಶೋಧಕನ ಅಥವಾ ಲೆಕ್ಕ ಪರಿಶೋಧಕರು, ಲೆಕ್ಕ ಪತ್ರಗಳಿಗೆ ಸಂಬಂಧಪಟ್ಟಂತೆ ಮಂಡಲಿಯು ಇಟ್ಟುಕೊಂಡು ಬಂದ ಎಲ್ಲಾ ಪುಸ್ತಕಗಳು ಮತ್ತು ಅವುಗಳ ಬಗ್ಗೆ ವೋಚರುಗಳನ್ನು ನೋಡಲು ಅವರಿಗೆ ಅವಕಾಶಕೊಡತಕ್ಕದು ಮತ್ತು ಆ ತರುವಾಯ ಅಥವಾ ಅವನಿಗೆ ಯಾವುದಕ್ಕೆ ಸಂಬಂಧಿಸಿದಂತೆ ಅವನು ಅಥವಾ ಅವರು ಲೆಕ್ಕಪತ್ರಗಳು ಸರಿಯಾಗಿಲ್ಲವೆಂದು ಭಾವಿಸುವರೋ ವೋಚರುಯಿಲ್ಲದಿರುವುದೋ ಅಥವಾ ನಿಯಮಗಳಿಗನುಸಾರವಾಗಿಲ್ಲದಿರುವುದೋ ಇವುಗಳನ್ನು ತೋರಿಸುವ ಅವನ ರುಜು ಅಥವಾ ಅವರ ರುಜುಗಳನ್ನು ಮಾಡಿ ಆ ನಮೂನೆಯ ಮೇಲೆ ಪ್ರತ್ಯೇಕವಾಗಿ

ಸೂಚಿಸುವ ಲೆಕ್ಕ ಪರಿಶೋಧಕನ ಘೋಷಣೆಗೆ ರುಜು ಮಾಡತಕ್ಕುದು. ಈ ವಿವರ ಪತ್ರದಲ್ಲಿ ಕೊಟ್ಟಿರುವ ವಿವರಗಳು:–

(ಕ) ಯಾವ ಸಂದಾಯವು ಅನಧಿಕೃತವೆಂದು ಅಥವಾ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾದುದು ಎಂದು ಕಂಡು ಬರುವುದೋ ಆ ಪ್ರತಿಯೊಂದು ಸಂದಾಯ;

(ಖ) ಯಾವನೇ ವ್ಯಕ್ತಿಯ ನಿರ್ಲಕ್ಷತೆ ಅಥವಾ ದುರ್ನಡತೆಯಿಂದಾಗಿ ವಹಿಸಲಾಗಿರುವುದಾಗಿ ಕಂಡು ಬರುವಂಥ ಯಾವುದೇ ಕೊರತೆ ಅಥವಾ ನಷ್ಟದ ಮೊಬಲಗು; ಮತ್ತು

(ಗ) ಯಾವನೇ ವ್ಯಕ್ತಿಯು ಲೆಕ್ಕಕ್ಕೆ ತರಬೇಕಾಗಿದ್ದಂಥ ಅದರೆ ತಂದಿಲ್ಲದಂಥ ಯಾವುದೇ ಮೊತ್ತದ ಮೊಬಲಗು;

–ಇವುಗಳನ್ನು ಸೂಚಿಸತಕ್ಕುದು.

**6. ವೆಚ್ಚವನ್ನು ಭರಿಸುವುದಕ್ಕಾಗಿ ಪ್ರಕ್ರಿಯೆ.–** (1) ಪ್ರತಿಯೊಂದು ಹಣಕಾಸು ವರ್ಷಕ್ಕಾಗಿನ ಬಜೆಟ್ ಅಂದಾಜುಗಳನ್ನು ತಯಾರಿಸತಕ್ಕುದು ಮತ್ತು ಅವುಗಳನ್ನು ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ಮೊದಲನೇ ದಿವಸದಂದು ಅಥವಾ ಅದಕ್ಕೆ ಮುಂಚೆ ಮಂಡಲಿಯ ಮುಂದೆ ಇಡತಕ್ಕುದು ಮತ್ತು ಮಂಡಲಿಯು ಅದನ್ನು ಅನುಮೋದಿಸಿದ ತರುವಾಯ ಅದನ್ನು ಡಿಸೆಂಬರ್ 15ರಂದು ಅಥವಾ ಅದಕ್ಕೆ ಮುಂಚೆ ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿಕೊಡತಕ್ಕುದು. ರಾಜ್ಯ ಸರ್ಕಾರವು, ಅದು ಅವಶ್ಯಕವೆಂದು ಪರ್ಯಾಲೋಚಿಸುವಂಥ ತಿದ್ದುಪಡಿಗಳನ್ನು ಮತ್ತು ಬದಲಾವಣೆಗಳನ್ನು ಮಾಡಿದ ತರುವಾಯ ಬಜೆಟನ್ನು ಜನವರಿ 15ಕ್ಕೆ ಮುಂಚೆ ಅನುಮೋದಿಸತಕ್ಕುದು.

(2) ತಿದ್ದುಪಡಿ ಮಾಡಿದ ಅಥವಾ ಬದಲಾವಣೆ ಮಾಡಿದ ಮತ್ತು ಅನುಮೋದಿಸಿದ ಬಜೆಟ್ ಆ ಹಣಕಾಸು ವರ್ಷಕ್ಕಾಗಿ ಮಂಡಲಿಯ ಬಜೆಟ್ಟಾಗಿರತಕ್ಕುದು ಮತ್ತು ಅದನ್ನು ಮಂಡಲಿಯ ಮೊಹರಿನೊಂದಿಗೆ ಮತ್ತು ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಮಂಡಲಿಯ ಅಧಿಕಾರಿಗಳ ರುಜುವಿನೊಂದಿಗೆ ಹೊರಡಿಸತಕ್ಕುದು.

(3) ಅನುಮೋದಿತ ಬಜೆಟ್ಟಿನ ಒಂದು ಪ್ರಮಾಣಿತ ಪ್ರತಿಯನ್ನು ಫೆಬ್ರವರಿ 28ಕ್ಕೆ ಮುಂಚೆ, ಸರ್ಕಾರಕ್ಕೆ ಕಳುಹಿಸಿಕೊಡತಕ್ಕುದು.

**7. ಹೆಚ್ಚುವರಿ ವೆಚ್ಚ.–** (1) ಹಣಕಾಸು ವರ್ಷದ ಕ್ರಮದಲ್ಲಿ ಬಜೆಟಿನಲ್ಲಿ ಮಾಡಿರುವ ವ್ಯವಸ್ಥೆಗಿಂತ ಮಿಗಿಲಾದ ಮತ್ತು ಹೆಚ್ಚಿನ ವೆಚ್ಚವನ್ನು ವಹಿಸುವುದು ಅವಶ್ಯವಾದರೆ ಮಂಡಲಿಯು ಪ್ರಸ್ತಾವಿತ ವೆಚ್ಚದ ವಿವರಗಳನ್ನು ಕೂಡಲೇ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದು ಮತ್ತು ಹೆಚ್ಚುವರಿ ವೆಚ್ಚವನ್ನು ಭರಿಸಲು ಅದು ಪ್ರಸ್ತಾವಿಸುವಂಥ ರೀತಿಯನ್ನು ನಿರ್ದಿಷ್ಟಪಡಿಸತಕ್ಕುದು. ರಾಜ್ಯ ಸರ್ಕಾರವು, ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಬದಲಾವಣೆಗಳನ್ನು ಮಾಡಿದ ತರುವಾಯ ಪ್ರಸ್ತಾವಿತ ವೆಚ್ಚವನ್ನು ಅನುಮೋದಿಸಬಹುದು ಅಥವಾ ಅದನ್ನು ತಿರಸ್ಕರಿಸಬಹುದು.

(2) (1)ನೇ ಉಪನಿಯಮದ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ಆದೇಶದ ಪ್ರತಿಯನ್ನು ಮಂಡಲಿಗೆ ಮತ್ತು ರಾಜ್ಯ ಸರ್ಕಾರವು ನೇಮಕ ಮಾಡಿದ ಲೆಕ್ಕ ಪರಿಶೋಧಕನು ಯಾವನಾದರೂ ಇದ್ದರೆ ಅವನಿಗೆ ಕಳುಹಿಸಿಕೊಡತಕ್ಕುದು.

(3) ಆ ವೆಚ್ಚವನ್ನು ಮಂಡಲಿಯ ಅನುಮೋದನೆಗೆ ಒಳಪಟ್ಟು ವಹಿಸತಕ್ಕುದು,

**8. ನಿಧಿಯಿಂದ ಅನುದಾನಕ್ಕಾಗಿನ ಅರ್ಜಿ.–** (1) ಯಾವನೇ ನಿಯೋಜಕನು, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಇತರ ನಿಕಾಯವು 8ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಮಂಜೂರಾತಿಗಾಗಿ ವೆಲ್‌ಫೇರ್ ಕಮೀಷನರನಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) ವೆಲ್‌ಫೇರ್ ಕಮೀಷನರನು ಅಂಥ ಪ್ರತಿಯೊಂದು ಅರ್ಜಿಯನ್ನು ಅವನು, ಅದನ್ನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗೆ ಅವನ ಷರಾಗಳೊಂದಿಗೆ ಮಂಡಲಿಯ ಮುಂದೆ ಇಡತಕ್ಕುದು.

(3) ವೆಲ್‌ಫೇರ್ ಕಮೀಷನರನು, ಮಂಡಲಿಯ ಶಿಫಾರಸ್ಸನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕುದು.

**9. ಸಂದಾಯದ ವಿಧಾನ.–** (ಕ) ನಿಧಿಯಿಂದ ಮಾಡುವ ಎಲ್ಲಾ ಸಂದಾಯಗಳನ್ನು,– ಐವತ್ತು ರೂಪಾಯಿಗಳಿಗಿಂತ ಕಡಿಮೆ ಮೊಬಲಗುಗಳನ್ನು ನಗದು ರೂಪದಲ್ಲಿ ಮಾಡಬಹುದು.

(ಖ) ಐವತ್ತು ರೂಪಾಯಿಯ ಅಥವಾ ಅದಕ್ಕಿಂತ ಹೆಚ್ಚಿನ ಮೊಬಲಗಿನ ನಿಧಿಯಿಂದ ಸಂದಾಯಗಳನ್ನು ವೆಲ್‌ಫೇರ್ ಕಮೀಷನರನು ಕೊಟ್ಟ ಚೆಕ್ಕಿನ ಮೂಲಕ ಮಾಡತಕ್ಕುದು;

ಪರಂತು, ಮಂಡಲಿಯು, ವಿಶೇಷ ಕಾರಣಗಳಿಗಾಗಿ, ನಿರ್ದಿಷ್ಟ ಪ್ರಕರಣಗಳಲ್ಲಿ ಸಂದಾಯಗಳನ್ನು ಸಹ ನಗದು ರೂಪದಲ್ಲಿ ಮಾಡಲು ಅಧಿಕೃತಗೊಳಿಸಬಹುದು.

**10. ಮಂಡಲಿಯ ರಚನೆ.–** (1) ಮಂಡಲಿಯು, ಹದಿನಾಲ್ಕು ಸದಸ್ಯರನ್ನು ಒಳಗೊಂಡಿರತಕ್ಕುದು, ಅವರ ಪೈಕಿ ನಾಲ್ವರು ನಿಯೋಜಕರ ಪ್ರತಿನಿಧಿಗಳು ಹಾಗೂ ನಾಲ್ವರು ನಿಯೋಜಿತರ ಪ್ರತಿನಿಧಿಗಳಾಗಿರತಕ್ಕುದು, ನಾಲ್ವರು ಸ್ವತಂತ್ರ ವೃತ್ತಿಯವರು ಮತ್ತು ಇಬ್ಬರು ಮಹಿಳಾ ಪ್ರತಿನಿಧಿಗಳಾಗಿರತಕ್ಕುದು.

(2) ನಿಯೋಜಕ ಮತ್ತು ನಿಯೋಜಿತರ ಪ್ರತಿಯೊಬ್ಬ ಪ್ರತಿನಿಧಿಯನ್ನು ಆ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಬಹುದಾದಂಥ ನಿಯೋಜಕ ಮತ್ತು ನಿಯೋಜಿತರು ಸಂಸ್ಥೆಗಳೊಂದಿಗೆ ಸಮಾಲೋಚಿಸಿ ನೇಮಕ ಮಾಡತಕ್ಕುದು.

11. **ಮಂಡಲಿಯ ಪುನರ್ ರಚನೆ.–** ಮಂಡಲಿಯನ್ನು ಪುನರ್ ರಚಿಸುವ ಪ್ರಕ್ರಿಯೆಯು 10ನೇ ನಿಯಮದ ಮೇರೆಗೆ ಮಂಡಲಿಯ ರಚನೆಗಾಗಿ ನಿಯಮಿಸಲಾದಂಥದೇ ಆಗಿರತಕ್ಕುದು.

**12. ಅಧ್ಯಕ್ಷ ಮತ್ತು ಇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು.–** (1) ಅಧ್ಯಕ್ಷನಿಗೆ.–

(ಕ) ಅವನು ಅಧಿಕಾರೇತರ ವ್ಯಕ್ತಿಯಾಗಿದ್ದರೆ,–

(i) ಪ್ರತಿ ತಿಂಗಳು 500 ರೂಪಾಯಿಗಳ ಭತ್ಯೆ; ಮತ್ತು

(ii) ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಭಾಗ VIIIದ ಮೇರೆಗೆ ಉಚ್ಚತಮ ವರ್ಗದ ಅಧಿಕಾರಿಗೆ ಅಂಗೀಕರಿಸಬಹುದಾದ ದರದಲ್ಲಿ ಪ್ರಯಾಣ ಭತ್ಯೆ.

(ಖ) ಅವನು ಸರ್ಕಾರಿ ನೌಕರನಾಗಿದ್ದರೆ, ಅವನ ವೇತನ ಮತ್ತು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಮೇರೆಗೆ ಅವನಿಗೆ ಅಂಗೀಕಾರಾರ್ಹವಾಗಿರುವ ಇತರ ಭತ್ಯೆಗಳನ್ನು–ಇವುಗಳನ್ನು ಸಂದಾಯ ಮಾಡತಕ್ಕುದು.

(2) ಮಂಡಲಿಯ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವರನ್ನು ಹಾಜರಾಗಿರಲು ಅಗತ್ಯಪಡಿಸಿದ ಸ್ಥಳದಲ್ಲಿ ಸಾಮಾನ್ಯವಾಗಿ ವಾಸಿಸದೆಯಿರುವ ಮಂಡಲಿಯ ಇತರ ಸದಸ್ಯರು, ಸರ್ಕಾರಿ ಸೇವಾ ನಿಯಮಗಳ ಅನುಬಂಧದ **'ಕ'** ಪಟ್ಟಿಯು ನಿರ್ದಿಷ್ಟಪಡಿಸಿರುವ ದರಗಳಲ್ಲಿ ಪ್ರಯಾಣ ಮತ್ತು ದಿನ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕುದು ಮತ್ತು ಅಂಥ ಸ್ಥಳದಲ್ಲಿ ಸಾಮಾನ್ಯವಾಗಿ ವಾಸವಾಗಿರುವ ಸದಸ್ಯರು ಪ್ರತಿ ದಿವಸ ಉಪವೇಶನಕ್ಕಾಗಿ ಇಪ್ಪತ್ತು ರೂಪಾಯಿಗಳನ್ನು ಮಾತ್ರ ಉಪವೇಶನ ಫೀಜನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕುದು.

**13. ಮಂಡಲಿಯ ಸಭೆಗಳು.–** (1) ಮಂಡಲಿಯು, ಕನಿಷ್ಟ ಮೂರು ತಿಂಗಳಿಗೊಮ್ಮೆ ಮತ್ತು ಅವಶ್ಯವಿರಬಹುದಾದಷ್ಟು ಸಲ ಸಭೆ ಸೇರತಕ್ಕುದು.

(2) ಸಭೆಯ ದಿನಾಂಕ, ವೇಳೆ ಹಾಗೂ ಸ್ಥಳ ಮತ್ತು ಸಭೆಯಲ್ಲಿ ವ್ಯವಹರಿಸಬೇಕಾದ ವ್ಯವಹಾರವನ್ನು ನಿರ್ದಿಷ್ಟಪಡಿಸಿ ಅದರ ಏಳು ಪೂರ್ಣ ದಿವಸಗಳ ನೋಟೀಸನ್ನು ಎಲ್ಲಾ ಸದಸ್ಯರಿಗೂ ಕೊಡತಕ್ಕುದು.

ಪರಂತು, ಅಧ್ಯಕ್ಷನ ಅಭಿಪ್ರಾಯದಲ್ಲಿ, ತುರ್ತು ಸ್ವರೂಪದ ವ್ಯವಹಾರವನ್ನು ನಡೆಸಬೇಕಾಗಿರುವಲ್ಲಿ ಮತ್ತು ಸದಸ್ಯರಿಗೆ ಆ ಬಗ್ಗೆ ತದನುಸಾರವಾಗಿ ಸದಸ್ಯರಿಗೆ ತಿಳಿಸಲಾಗಿರುವಲ್ಲಿ ಯಾವುದೇ ಅಂಥ ನೋಟೀಸು ಅವಶ್ಯವಿರತಕ್ಕುದಲ್ಲ.

**14. ಕೋರಂ.–** ಮಂಡಲಿಯ ಸಭೆಯಲ್ಲಿ ಕೋರಂ ಆಗಲು ಅವಶ್ಯವಾದ ಸದಸ್ಯರ ಸಂಖ್ಯೆಯು ಅಧ್ಯಕ್ಷನನ್ನು ಒಳಗೊಂಡು ಏಳು ಆಗಿರತಕ್ಕುದು.

**15. ಅಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕುದು.–** ಮಂಡಲಿಯ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷನು, ಅಧ್ಯಕ್ಷತೆಯನ್ನು ವಹಿಸತಕ್ಕುದು ಅಥವಾ ಯಾವುದೇ ಕಾರಣಕ್ಕಾಗಿ ಅಧ್ಯಕ್ಷನು ಅದರಲ್ಲಿ ಹಾಜರಿರಲು ಅಸಮರ್ಥನಾದರೆ ಆ ಹಾಜರಿರುವ ಸದಸ್ಯರು ಸಭೆಯಲ್ಲಿ ಆಯ್ಕೆ ಮಾಡಬಹುದಾದಂಥ ಸದಸ್ಯನು ಅಧ್ಯಕ್ಷತೆಯನ್ನು ವಹಿಸತಕ್ಕುದು.

**16. ಸಭೆಯನ್ನು ಮುಂದಕ್ಕೆ ಹಾಕುವುದು.–** ಕೋರಂ ಇಲ್ಲದಿರುವಲ್ಲಿ ಅಧ್ಯಕ್ಷನು ಗೊತ್ತುಪಡಿಸಿದ ವೇಳೆಯು, ಮುಕ್ತಾಯವಾದ ತರುವಾಯ ಮೂವತ್ತು ನಿಮಿಷಗಳವರೆಗೆ ಅವನು ಯುಕ್ತವಾಗಿ ನಿಗದಿಪಡಿಸಬಹುದಾದಂಥ ಮುಂದಿನ ಇತರ ಯಾವುದೇ ದಿವಸದಂದು ಅಂಥ ನಿಯಮಿತ ವೇಳೆಗೆ ಸಭೆಯನ್ನು ಮುಂದೂಡತಕ್ಕುದು. ಅಂಥ ಮುಂದೂಡಿದ ಸಭೆಯ ಬಗ್ಗೆ ನೋಟೀಸನ್ನು ಮಂಡಲಿಯ ಪ್ರತಿಯೊಬ್ಬ ಸದಸ್ಯನಿಗೆ ಕಳುಹಿಸಿಕೊಡತಕ್ಕುದು ಮತ್ತು ಅದರಲ್ಲಿ ಕೋರಂ ಇದ್ದಿದ್ದರೆ, ಮೂಲ ಸಭೆಯ ಮುಂದೆ ತರಬಹುದಾಗಿದ್ದಂಥ ಮುಂದೂಡಿದ ಸಭೆಯ ಮುಂದೆ ತರತಕ್ಕುದು ಮತ್ತು ಅಂಥ ಸಭೆಯಲ್ಲಿ ಕೋರಂ ಇರಲಿ ಅಥವಾ ಇಲ್ಲದಿರಲಿ ಅದನ್ನು ವಿಲೆ ಮಾಡಬಹುದು,

**17. ಎಲ್ಲಾ ಪ್ರಶ್ನೆಗಳನ್ನು ಬಹುಮತದ ಮೂಲಕ ತೀರ್ಮಾನಿಸತಕ್ಕುದು.–** ಮಂಡಲಿಯ ಸಭೆಯಲ್ಲಿನ ಎಲ್ಲಾ ಪ್ರಶ್ನೆಗಳನ್ನು, ಹಾಜರಿದ್ದು ಮತ್ತು ಮತ ಚಲಾಯಿಸುವ ಸದಸ್ಯರು ಬಹು ಮತದ ಮೂಲಕ ತೀರ್ಮಾನಿಸತಕ್ಕುದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಧ್ಯಕ್ಷನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕುದು.

**18. ಮತಗಳನ್ನು ಚಲಾಯಿಸುವ ವಿಧಾನ.–** ಕೈಗಳನ್ನು ತೋರಿಸುವ ಮೂಲಕ ಮತಗಳನ್ನು ತೆಗೆದುಕೊಳ್ಳತಕ್ಕುದು ಮತ್ತು ಯಾವುದೇ ಪ್ರಸ್ತಾವದ ಪರವಾಗಿ ಮತ್ತು ಅದಕ್ಕೆ ವಿರುದ್ಧವಾಗಿ ಮತಗಳನ್ನು ಕೊಡುವ ವ್ಯಕ್ತಿಯ ಹೆಸರುಗಳನ್ನು ಹಾಗೆ ಮಾಡಲು ಯಾವನೇ ಸದಸ್ಯ ಅಧ್ಯಕ್ಷನನ್ನು ಕೋರಿಕೊಂಡರೆ ಮಾತ್ರ ದಾಖಲು ಮಾಡತಕ್ಕುದು.

**19. ಸಭೆಯ ನಡವಳಿಕೆಗಳು.–** ಮಂಡಲಿಯು, ಮಂಡಲಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳ ನಡವಳಿಕೆಗಳನ್ನು ಇಡತಕ್ಕುದು ಮತ್ತು ಅದರಲ್ಲಿ ಹಾಜರಿರುವ ಸದಸ್ಯರ ಹೆಸರನ್ನು ಅದರಲ್ಲಿ ಸೇರಿಸತಕ್ಕುದು.

ಅಂಥ ನಡವಳಿಕೆಗಳ ಪ್ರತಿಯನ್ನು ಮಂಡಲಿಯು ಅವುಗಳನ್ನು ಸ್ಥಿರೀಕರಿಸಿದ ಕೂಡಲೇ ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕುದು.

**20. ಸಿಬ್ಬಂದಿ ಇತ್ಯಾದಿಗಳ ಮೇಲಿನ ವೆಚ್ಚದ ಪರಿಮಿತಿ.–** ಮಂಡಲಿಯು, ಅದು ನೇಮಕ ಮಾಡಿದ ಸಿಬ್ಬಂದಿಯು ಮತ್ತು ಇತರ ಆಡಳಿತಾತ್ಮಕ ವೆಚ್ಚಗಳ ಬಗ್ಗೆ ನಿಧಿಯ ಸರಾಸರಿ ವಾರ್ಷಿಕ ಆದಾಯದ ಶೇಕಡಾ ಇಪ್ಪತ್ತನ್ನು ಮೀರಿದ ಯಾವುದೇ ಮೊತ್ತವನ್ನು ವೆಚ್ಚ ಮಾಡತಕ್ಕುದಲ್ಲ.

**21. ಮಂಡಲಿಯ ಸಿಬ್ಬಂದಿಯ ಸೇವಾ ಷರತ್ತುಗಳು.–** ಮಂಡಲಿಯ ಸಿಬ್ಬಂದಿಯ ಸೇವಾ ಷರತ್ತುಗಳು ಈ ನಿಯಮಗಳಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಿರುವಷ್ಟರ ಮಟ್ಟಿಗೆ ಹೊರತು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಮೂಲಕ ರಾಜ್ಯ ಸರ್ಕಾರದ ಸಿಬ್ಬಂದಿಗೆ ಅನ್ವಯವಾಗುವಂಥವೇ ಆಗಿರತಕ್ಕುದು.

**22. ವೆಲ್‌ಫೇರ್ ಕಮೀಷನರ್.–** ವೆಲ್‌ಫೇರ್ ಕಮೀಷನರನನ್ನು, ಸಹಾಯಕ ಕಮೀಷನರನ ದರ್ಜೆಗೆ ಕಡಿಮೆಯಿಲ್ಲದ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಪೈಕಿಯವರಿಂದ ಪ್ರತಿನಿಯೋಜನೆಯ ಮೇಲೆ ನೇಮಕ ಮಾಡತಕ್ಕುದು.

**23. ವೆಲ್‌ಫೇರ್ ಕಮೀಷನರನಿಗೆ ಅಧಿಕಾರಗಳ ಪ್ರತ್ಯಾಯೋಜನೆ.–** ವೆಲ್‌ಫೇರ್ ಕಮೀಷನರನು ಈ ಅಧಿನಿಯಮದ 12ನೇ ಪ್ರಕರಣದ ಮೇರೆಗೆ ಪ್ರದಾನ ಮಾಡಿದ ಅಧಿಕಾರಗಳ ಜೊತೆಗೆ, ಈ ಕೆಳಕಂಡ ಅಧಿಕಾರಗಳನ್ನು ಚಲಾಯಿಸಬಹುದು,–

(i) ನಾನ್ ಗೆಜೆಟೆಡ್ ಸಿಬ್ಬಂದಿಯವರಿಗೆ ಎರಡು ತಿಂಗಳವರೆಗೆ ಗಳಿಕೆ ರಜೆ, ಅರ್ಧ ವೇತನ ರಜೆ, ಸಂಯೋಜಿತ ರಜೆ ಅಥವಾ ಪ್ರಸೂತಿ ರಜೆಯನ್ನು ಮಂಜೂರು ಮಾಡುವುದು;

(ii) ರಜಾ ಕಾಲದ ಖಾಲಿ ಸ್ಥಾನಗಳಲ್ಲಿ IIIನೇ ವರ್ಗದ ಹಾಗೂ IVನೇ ವರ್ಗದ ತಾತ್ಕಾಲಿಕ ಸಿಬ್ಬಂದಿಯನ್ನು ಎರಡು ತಿಂಗಳ ಅವಧಿಯವರೆಗೆ ನೇಮಕ ಮಾಡುವುದು;

(iii) ಪ್ರತಿ ವರ್ಷ 100 ರೂಪಾಯಿಗಳಿಗೊಳಪಟ್ಟು ಒಂದು ಬಾರಿಗೆ 25 ರೂಪಾಯಿಗಳ ಮಿತಿಯವರೆಗೆ ಲೇಖನ ಸಾಮಗ್ರಿಯನ್ನು ಖರೀದಿಸುವುದು;

(iv) ಪ್ರತಿ ಸಂದರ್ಭದಲ್ಲಿ 50–00 ರೂಪಾಯಿಗಳ ಮಿತಿಯವರೆಗೆ ಪೀಠೋಪಕರಣಗಳು ಮತ್ತು ಬೆರಳಚ್ಚು ಯಂತ್ರಗಳು, ಗಡಿಯಾರ ಇತ್ಯಾದಿಗಳಂಥ ಇತರ ಸಾಧನ ಸಾಮಗ್ರಿಗಳನ್ನು ದುರಸ್ಥಿ ಮಾಡಿಸುವುದು;

(v) ನಾನ್ ಗೆಜೆಟೆಡ್ ಸಿಬ್ಬಂದಿಗೆ ಪ್ರಯಾಣ ಭತ್ಯೆ ಮುಂಗಡವನ್ನು ಮಂಜೂರು ಮಾಡುವುದು;

(vi) ನಾನ್ ಗೆಜೆಟೆಡ್ ಸಿಬ್ಬಂದಿಯ ಪ್ರಯಾಣ ಭತ್ಯೆದ ಬಿಲ್ಲುಗಳಿಗೆ ಮೇಲು ರುಜು ಮಾಡುವುದು;

(vii) ಜಾಹೀರಾತುಗಳನ್ನು ಒಳಗೊಂಡು ಅಧಿಸೂಚನೆಯನ್ನು ವೃತ್ತ ಪತ್ರಿಕೆಗಳಲ್ಲಿ ಪ್ರಕಟಿಸುವ ಬಗ್ಗೆ 50 ರೂಪಾಯಿಗಳನ್ನು ಮೀರದ ವೆಚ್ಚವನ್ನು ಮಂಜೂರು ಮಾಡುವುದು;

(viii) ಡೇರಿ ಖರೀದಿಯನ್ನು ಮಂಜೂರ್ಮಾಡುವುದು;

(ix) ಸರ್ಕಾರಿ ಪ್ರಕಟಣೆಗಳನ್ನು, ಸರ್ಕಾರಿ ಬುಕ್ ಡಿಪೋದಿಂದ ಖರೀದಿಸುವುದು;

(x) ಒಂದು ಬಾರಿಗೆ 100 ರೂಪಾಯಿಗಳು ಮತ್ತು ಪ್ರತಿ ವರ್ಷಕ್ಕೆ 500 ರೂಪಾಯಿಗಳನ್ನು ಮೀರದ ಖರ್ಚಿನಲ್ಲಿ ಇಲಾಖೆಯ ಚಟುವಟಿಕೆಗಳ ಬಗ್ಗೆ ಮುದ್ರಣ ಮತ್ತು ಪ್ರಕಟಣೆ ಮತ್ತು ಕೈಪಿಡಿಗಳ ಕರ ಪತ್ರಗಳಿಗಾಗಿ ವೆಚ್ಚಗಳನ್ನು ಮಂಜೂರು ಮಾಡುವುದು;

(xi) ನಾನ್ ಗೆಜೆಟೆಡ್ ಸಿಬ್ಬಂದಿ ವೇತನ ಬಡ್ತಿಗಳನ್ನು ಮಂಜೂರು ಮಾಡುವುದು;

(xii) ನಾನ್ ಗೆಜೆಟೆಡ್ ಸಿಬ್ಬಂದಿಗೆ ವೈದ್ಯಕೀಯ ವೆಚ್ಚಗಳನ್ನು ಮಂಜೂರು ಮಾಡುವುದು;

(xiii) ಸಾಮುದಾಯಿಕ ಅವಶ್ಯಕತೆಗಳಿಗಾಗಿ ಒಂದು ಬಾರಿಗೆ 100 ರೂಪಾಯಿಗಳನ್ನು ಮೀರದಂತೆ ವೆಚ್ಚವನ್ನು ಮಂಜೂರು ಮಾಡುವುದು;

(xiv) ಒಂದು ಬಾರಿಗೆ 100 ರೂಪಾಯಿಗಳನ್ನು ಮೀರದ ಖರ್ಚಿನಲ್ಲಿ ಆಟಗಳು ಮತ್ತು ಕ್ರೀಡೆಗಳಿಗಾಗಿ ವೆಚ್ಚವನ್ನು ಮಂಜೂರು ಮಾಡುವುದು.

(xv) ಒಂದು ಬಾರಿಗೆ 100 ರೂಪಾಯಿಗಳನ್ನು ಮೀರದ ಖರ್ಚಿನಲ್ಲಿ ಮನೋರಂಜನೆ ಮತ್ತು ಇತರ ಬಗೆಯ ವಿನೋದಗಳಿಗಾಗಿ ವೆಚ್ಚವನ್ನು ಮಂಜೂರು ಮಾಡುವುದು.

**24. ಪರಿಶೀಲಕರ ಕರ್ತವ್ಯಗಳು.–** ಪರಿಶೀಲಕನು ಅಧಿನಿಯಮದ ಉಪಬಂಧಗಳನ್ನು ಮತ್ತು ನಿಯಮಗಳ ಮತ್ತು ಅಧಿನಿಯಮದ ಮೇರೆಗೆ ಸರ್ಕಾರವು ಮಾಡಿದ ಯಾವುದೇ ಆದೇಶವನ್ನು ಕ್ರಮಬದ್ಧವಾಗಿ ಪಾಲಿಸಲಾಗುತ್ತಿದೆಯೋ ಎಂಬ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅವಶ್ಯವಾಗಿರುವುದೆಂದು ಅವನಿಗೆ ಕಂಡುಬರಬಹುದಾದಂಥ ಪರೀಕ್ಷೆಯನ್ನು ಮಾಡತಕ್ಕುದು, ವಿಶೇಷವಾಗಿ ಅವನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕುದು ಮತ್ತು–

(i) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವನು ಅವಶ್ಯವೆಂದು ಭಾವಿಸುವಂಥ ಆವರಣ ಮತ್ತು ನಿಯಮಿಸಿದ ಯಾವುದೇ ರಿಜಿಸ್ಟರುಗಳು ದಾಖಲೆಗಳು ಮತ್ತು ನೋಟೀಸುಗಳ ಬಗ್ಗೆ ಅಂಥ ಪರೀಕ್ಷೆಯನ್ನು ಮಾಡತಕ್ಕುದು ಮತ್ತು ಸ್ಥಳದಲ್ಲಿಯೇ ಅಥವಾ ಅನ್ಯಥಾ ಯಾವನೇ ವ್ಯಕ್ತಿಯ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕುದು; ಮತ್ತು

(ii) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು;

ಪರಂತು, ಯಾವನೇ ವ್ಯಕ್ತಿ ಸ್ವತಃ ಅವನನ್ನು ಅಪರಾಧದಲ್ಲಿ ಸಿಕ್ಕಿಸಲು ಪ್ರವೃತ್ತನಾಗುವ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಥವಾ ಯಾವುದೇ ಸಾಕ್ಷ್ಯವನ್ನು ಕೊಡಲು ಅಗತ್ಯಪಡಿಸತಕ್ಕುದಲ್ಲ.

**25. ಮಂಡಲಿಯ ಸಿಬ್ಬಂದಿಯ ವೆಚ್ಚಗಳು ಮತ್ತು ಇತರ ಆಡಳಿತಾತ್ಮಕ ವೆಚ್ಚಗಳು.–** ಮಂಡಲಿಯಿಂದ ನೇಮಕಗೊಂಡ ಲಿಪಿಕ ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಯ ಖರ್ಚು ವೆಚ್ಚಗಳು ಮತ್ತು ಇತರ ಆಡಳಿತಾತ್ಮಕ ವೆಚ್ಚಗಳು ಆ ನಿಧಿಯ ವಾರ್ಷಿಕ ಆದಾಯ ಶೇಕಡಾ ಇಪ್ಪತ್ತರಷ್ಟನ್ನು ಮೀರತಕ್ಕುದಲ್ಲ:

ಪರಂತು, ಮಂಡಲಿಯು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಮೇಲೆ ನಿರ್ದಿಷ್ಟಪಡಿಸಿದ ಶೇಕಡಾವಾರನ್ನು ಮೀರದಂಥ ವೆಚ್ಚಗಳನ್ನು ವಹಿಸಬಹುದು.

**26. ಸ್ವತ್ತಿನ ವಿಲೇವಾರಿ.–** ಮಂಡಲಿಯು–

(ಕ) ಯಾವುದರ ಮೌಲ್ಯವು, ಪ್ರತಿಯೊಂದು ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಮೀರುವುದಿಲ್ಲವೋ ಮಂಡಲಿಗೆ ಸೇರಿದ ಆ ಯಾವುದೇ ಚರಸ್ವತ್ತನ್ನು ಮಾರಾಟ ಅಥವಾ ವಿನಿಮಯದ ಮೂಲಕ ವಿಲೇ ಮಾಡಬಹುದು ಅಥವಾ ಮಂಡಲಿಗೆ ಸೇರಿದ ಯಾವುದೇ ಸ್ಥಿರ ಸ್ವತ್ತನ್ನು 12 ತಿಂಗಳುಗಳಿಗೆ ಮೀರದ ಯಾವುದೇ ಅವಧಿಗಾಗಿ ಬಾಡಿಗೆಗೆ ಕೊಡಬಹುದು.

(ಖ) ರಾಜ್ಯ ಸರ್ಕಾರದ ಮಂಜೂರಾತಿಯನ್ನು ಪಡೆದು ಮಂಡಲಿಗೆ ಸೇರಿದ ಇತರ ಚರ ಅಥವಾ ಸ್ಥಿರ ಸ್ವತ್ತನ್ನು ಬಾಡಿಗೆಗೆ ಕೊಡಬಹುದು, ಮಾರಾಟ ಮಾಡಬಹುದು ಅಥವಾ ಅನ್ಯಥಾ ವಿಲೆ ಮಾಡಬಹುದು.

**27. ಕರಾರುಗಳನ್ನು ಬರೆದುಕೊಡುವುದಕ್ಕಾಗಿ ಪ್ರಕ್ರಿಯೆ.–** (1) ಮಂಡಲಿಯು, ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವುದಕ್ಕಾಗಿ ಅದು ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸ ಬಹುದಾದಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳಬಹುದು ಮತ್ತು ಅವುಗಳನ್ನು ನೆರವೇರಿಸಬಹುದು.

(2) ಈ ಅಧಿನಿಯಮದ ಮೇರೆಗೆ ಅಥವಾ ಅದರ ಯಾವುದೇ ಉದ್ದೇಶಕ್ಕಾಗಿ ಮಾಡಿಕೊಂಡ ಪ್ರತಿಯೊಂದು ಕರಾರನ್ನು ಮಂಡಲಿಯ ಪರವಾಗಿ,–

(i) ವೆಲ್‌ಫೇರ್ ಕಮೀಷನರನು, ಅಥವಾ

(ii) ಅದು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಅದು ಅಧಿಕೃತಗೊಳಿಸಬಹುದಾದಂಥ ಮಂಡಲಿಯ ಸದಸ್ಯರು ಅಥವಾ ಅಧಿಕಾರಿಯು–ಮಾಡಿಕೊಳ್ಳತಕ್ಕುದು.

ಪರಂತು, ಹತ್ತು ಸಾವಿರ ರೂಪಾಯಿಗಳನ್ನು ಮೀರಿದ ವೆಚ್ಚವನ್ನು ಒಳಗೊಳ್ಳುವ ಯಾವುದೇ ಕರಾರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದುಕೊಳ್ಳತಕ್ಕುದು.

**28. ಮಂಡಲಿಯ ವಾರ್ಷಿಕ ವರದಿಯ ಪ್ರಕಟಣೆ.–** ಮಂಡಲಿಯು, ಪ್ರತಿ ಹಣಕಾಸು ವರ್ಷವು ಮುಕ್ತಾಯವಾದ ದಿನಾಂಕದಿಂದ ಮೂರು ತಿಂಗಳೊಳಗೆ ಆ ವರ್ಷದಲ್ಲಿನ ಅದರ ಚಟುವಟಿಕೆಗಳನ್ನು ಕೊಡುವ ವಾರ್ಷಿಕ ವರದಿಯೊಂದಿಗೆ ಜಮೆಗಳು ಮತ್ತು ವೆಚ್ಚಗಳ ಲೆಕ್ಕ ಪರಿಶೋಧಿತ ವಿವರಣ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಅನುಮೋದನೆಗಾಗಿ ಒಪ್ಪಿಸತಕ್ಕುದು. ರಾಜ್ಯ ಸರ್ಕಾರವು ಆ ವಿವರಣ ಪತ್ರ ಮತ್ತು ವರದಿಯನ್ನು ಅನುಮೋದಿಸಿದ ತರುವಾಯ, ಮಂಡಲಿಯು, ಅದು ಸೂಕ್ತ ಎಂದು ಭಾವಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಕಟಿಸುವಂತೆ ಮಾಡತಕ್ಕುದು. ಅಂಥ ಪ್ರತಿಯೊಂದು ವಿವರಣ ಪತ್ರವನ್ನು ಮತ್ತು ವರದಿಯನ್ನು, ಅವು ಪ್ರಕಟವಾದ ತರುವಾಯ ಆದಷ್ಟು ಬೇಗ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಇಡತಕ್ಕುದು.

**29. ಕೆಲಸದ ನಿಯೋಜಕರು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು.–** (1) ಮಜೂರಿಗಳ ಸಂದಾಯ ಅಧಿನಿಯಮ 1936 – ಇದು ಅನ್ವಯವಾಗದಿರುವಂಥ ಕಾರ್ಯ ಸಂಸ್ಥೆಯ ಪ್ರತಿಯೊಬ್ಬ ನಿಯೋಜಕನು,–

(ಕ) ‘ಕ’ ನಮೂನೆಯಲ್ಲಿ ಮಜೂರಿಗಳ ರಿಜಿಸ್ಟರನ್ನು; ಮತ್ತು

(ಖ) ‘ಖ’ ನಮೂನೆಯಲ್ಲಿ ಕ್ಲೇಮು ಮಾಡಿಲ್ಲದ ಮಜೂರಿಗಳ ಮತ್ತು ಜುಲ್ಮಾನೆಗಳ ಕ್ರೋಢೀಕರಿಸಲಾದ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕುದು.

(2) ಅಂಥ ನಿಯೋಜಕನು ಪ್ರತಿ ವರ್ಷದ ಜನವರಿ 31ರೊಳಗಾಗಿ ವೆಲ್‌ಫೇರ್ ಕಮೀಷನರಿಗೆ ಹಿಂದಿನ ವರ್ಷಕ್ಕೆ ಸಂಬಂಧಪಟ್ಟ ‘ಖ’ ನಮೂನೆಯಲ್ಲಿನ ರಿಜಿಸ್ಟರಿನ ಉದ್ಧೃತಿಯ ಪ್ರತಿಯನ್ನು ಕಳುಹಿಸಿ ಕೊಡತಕ್ಕುದು.

**ನಮೂನೆ–“ಕ”**

**(ನಿಯಮ–29) ಮಜೂರಿಗಳ ರಿಜಿಸ್ಟರು**

| ಕ್ರಮ ಸಂಖ್ಯೆ | ನಿಯೋಜಿತನ ಹೆಸರು | ಟಿಕೆಟ್ ಮತ್ತು ಬ್ಯಾಡ್ಜ್ ನಂಬರು | ಉದ್ಯೋಗ | ತಿಂಗಳ ಅವಧಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗುಗಳು | | | | ತಿಂಗಳು ಅವಧಿಯಲ್ಲಿ ಕಳೆದ ಮೊಬಲಗುಗಳು | |
|---|---|---|---|---|---|---|---|---|---|
| | | | | ಮೂಲ ಮಜೂರಿ | ಅಧಿಕ ಕಾಲಿಕ | ತುಟ್ಟಿಭತ್ಯ ಮತ್ತು ಇತರ ಭತ್ಯೆಗಳು | ಬೋನಸ್ | ಜುಲ್ಮಾನೆಗಳು | ಇತರ ಕಳೆತಗಳು |
| 1 | 2 | 3 | 4 | 5 | 6 | 7 | 8 | 9 | 10 |

ತಿಂಗಳ ಅವಧಿಯಲ್ಲಿ ವಾಸ್ತವಿಕವಾಗಿ ಸಂದಾಯ ಮಾಡಿದ ಮೊಬಲಗುಗಳು ನಿಯೋಜಿತನಿಗೆ ಬಾಕಿಯಾದ ಶಿಲ್ಕು

| ಮೂಲ ಮಜೂರಿಗಳು | ಅಧಿಕ ಕಾಲಿಕ | ತುಟ್ಟಿ ಭತ್ಯೆ ಮತ್ತು ಇತರ ಭತ್ಯೆಗಳು | ಬೋನಸ್ | ಮೂಲ ಮಜೂರಿಗಳು | ಅಧಿಕ ಕಾಲಿಕ | ತುಟ್ಟಿ ಭತ್ಯೆ ಮತ್ತು ಇತರ ಭತ್ಯೆಗಳು | ಬೋನಸ್ |
|---|---|---|---|---|---|---|---|
| 11 | 12 | 13 | 14 | 15 | 16 | 17 | 18 |

**ನಮೂನೆ–ಖ**

**(ನಿಯಮ–29)**

---------- ವರ್ಷಕ್ಕಾಗಿ ವಸೂಲು ಮಾಡಿದ ಜುಲ್ಮಾನೆಗಳು ಮತ್ತು ಸಂದಾಯ ಮಾಡಿಲ್ಲದ ಸಂಚಯಗಳ ರಿಜಿಸ್ಟರು

| **ಮಾರ್ಚ್ 31ರಂದು ಕೊನೆಗೊಳ್ಳುವ ತ್ರೈಮಾಸಿಕ ಸೆಪ್ಟೆಂಬರ್ 30ರಂದು ಕೊನೆಗೊಳ್ಳುವ ತ್ರೈಮಾಸಿಕ** | **ಜೂನ್ 30ರಂದು ಕೊನೆಗೊಳ್ಳುವ ತ್ರೈಮಾಸಿಕ ಡಿಸೆಂಬರ್ 31ರಂದು ಕೊನೆಗೊಳ್ಳುವ ತ್ರೈಮಾಸಿಕ** |
|---|---|
| 1. ಜುಲ್ಮಾನೆಗಳ ಅಡಿಯಲ್ಲಿ ವಸೂಲು ಮಾಡಿದ ಒಟ್ಟು ಮೊಬಲಗು<br>(i) ಮೂಲ ಮಜೂರಿ<br>(ii) ಅಧಿಕ ಕಾಲಿಕ<br>(iii) ತುಟ್ಟಿ ಭತ್ಯೆಗಳು ಮತ್ತು ಇತರ ಭತ್ಯೆಗಳು– ಇವುಗಳ ಸಂದಾಯ ಮಾಡಿಲ್ಲದ ಸಂಚಯಗಳಾಗುವ ಒಟ್ಟು ಮೊಬಲಗು | |
| (1) ಮತ್ತು (2)ರ ಒಟ್ಟು ಮೊಬಲಗು | |

ಕರ್ನಾಟಕ **"**ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ**"** 1965ರ 2(1)ನೇ ಪ್ರಕರಣದ ಮೇರೆಗೆ 'ಸಂದಾಯ ಮಾಡಿಲ್ಲದ ಸಂಚಯಗಳು' ಇದರ ಪರಿಭಾಷೆಯನ್ನು ನೋಡಿ.

**ಉದಾಹರಣೆಗಾಗಿ:** 1953ರ ಜೂನ್‌ರಂದು ಕೊನೆಗೊಳ್ಳುವ ತ್ರೈಮಾಸಿಕ ಅಂಕಣದಲ್ಲಿ 1950ರ ಜನವರಿ–ಮಾರ್ಚ್ ತ್ರೈಮಾಸಿಕದ ಅವಧಿಯಲ್ಲಿ ನಿಯೋಜಿತರಿಗೆ ಬಾಕಿಯಾಗುವಂಥ ಮತ್ತು ಅಂದಿನಿಂದ ಸಂದಾಯ ಮಾಡಿಲ್ಲದೆ ಉಳಿದಿರುವಂಥ ಸಂದಾಯಗಳನ್ನು ತೋರಿಸತಕ್ಕುದು.

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ 1965ರ 7(3)ನೇ ಪ್ರಕರಣದ ಮೇರೆಗೆ ಮಂಡಲಿಯು ಪ್ರಕಟಿಸಬೇಕಾಗಿರುವ ನೋಟೀಸಿನಲ್ಲಿ ಒದಗಿಸಬೇಕಾದ ವಿವರಗಳು.

1. ನಿಯೋಜಕನ ಹೆಸರು
2. ಟೋಕನ್ ನಂ. ಮತ್ತು ವಿಳಾಸದೊಂದಿಗೆ ಕೆಲಸಗಾರನ ಹೆಸರು
3. ಅವನು/ಅವಳು ಕೆಲಸ ಮಾಡುತ್ತಿರುವ ಶಾಖೆ
4. ಸಂದಾಯ ಮಾಡಿಲ್ಲದ ಸಂಚಯವು ಸಂಬಂಧಪಡುವಂಥ ಅವಧಿ
5. ಕೆಲಸಗಾರನು ಗಳಿಸಿದ ಮಜೂರಿಗಳ ವಿವರಗಳು:

(ಕ) ವಾಸ್ತವಿಕ ಮಜೂರಿಗಳು (ಮೂಲಕ)

(ಖ) ಅಧಿಕ ಕಾಲಿಕ ಮಜೂರಿಗಳು

(ಗ) ತುಟ್ಟಿ ಭತ್ಯ

(ಘ) ಇತರ ಭತ್ಯೆ

(ಙ) ಕಳೆತಗಳು ಯಾವುದಾದರೂ ಇದ್ದರೆ, ಅವು

(ಚ) ಕೆಲಸಗಾರನಿಗೆ ಬಾಕಿಯಾದ ಶಿಲ್ಕು

### ನಮೂನೆ–ಫ

### (ನಿಯಮ–3ಕ)

ನಿಯೋಜಕನು ಜನವರಿ 15ರ ಒಳಗೆ ಕಳುಹಿಸಿ ಕೊಡಬೇಕಾದ ನಿಯೋಜಕರು ಮತ್ತು ನಿಯೋಜಿತರ ವಂತಿಗೆಯ ವಿವರಣ ಪತ್ರ.

1. ಕಾರ್ಯ ಸಂಸ್ಥೆ ಹೆಸರು ಮತ್ತು ವಿಳಾಸ

2. ನಿಯೋಜಕನ ಹೆಸರು

3. ಡಿಸೆಂಬರ್ 31ರಂದು ಇದ್ದ ಹಾಗೆ ಕಾರ್ಯ ಸಂಸ್ಥೆಯ ರಿಜಿಸ್ಟರುಗಳಲ್ಲಿ ಹೆಸರುಗಳು ಇರುವ ಕೆಲಸಗಾರರ ಒಟ್ಟು ಸಂಖ್ಯೆ

4. ಪ್ರತಿ ನಿಯೋಜಿತನಿಗೆ ಒಂದು ರೂಪಾಯಿ ದರದಂತೆ ನಿಯೋಜಿತರ ವಂತಿಗೆ

5. ಪ್ರತಿ ನಿಯೋಜಿತನಿಗೆ ಎರಡು ರೂಪಾಯಿ ದರದಂತೆ ನಿಯೋಜಿತರ ವಂತಿಗೆ

6. 4 ಮತ್ತು 5ನೇ ಬಾಬುಗಳ ಒಟ್ಟು ಮೊಬಲಗು

7. ವಂತಿಗೆಯನ್ನು ಚೆಕ್ ಮೂಲಕ, ಬ್ಯಾಂಕ್ ಡ್ರಾಫ್ಟ್ ಮನಿ ಆರ್ಡರ್ ಮೂಲಕ ಅಥವಾ ನಗದಿನ ರೂಪದಲ್ಲಿ ಕಳುಹಿಸಲಾಗಿದೆಯೋ ಹೇಗೆ ಮತ್ತು ಅದರ ವಿವರಗಳು.

ನಿಯೋಜಕನ ರುಜು

### ನಮೂನೆ–ಜ

### (3–ಕ ನಿಯಮ ನೋಡಿ)

ಡಿಸೆಂಬರ್ 31ರಂದು ಕೊನೆಗೊಳ್ಳುವ ವರ್ಷಕ್ಕಾಗಿ ವೆಲ್‌ಫೇರ್ ಕಮೀಷನರನು ಸ್ವೀಕರಿಸಿದ ನಿಯೋಜಕರ ವಂತಿಗೆಯ ವಿವರ ಪತ್ರ.

| **ಕಾರ್ಯ ಸಂಸ್ಥೆಯ ಹೆಸರು** | **ವೆಲ್‌ಫೇರ್ ಕಮೀಷನರನು ಸ್ವೀಕರಿಸಿದ ನಿಯೋಜಕರ ಮತ್ತು ನಿಯೋಜಿತರ ವಂತಿಗೆಯ ಮೊಬಲಗು** |
|---|---|
| | |
| ಒಟ್ಟು ರೂ. | |

ವೆಲ್‌ಫೇರ್ ಕಮೀಷನರ ರುಜು

**ಘೋಷ್ವಾರೆ:**

ನಿಯೋಜಿತರ ವಂತಿಗೆ ರೂಪಾಯಿಗಳು

ನಿಯೋಜಕರ ವಂತಿಗೆ ರೂಪಾಯಿಗಳು

ಒಟ್ಟು ರೂಪಾಯಿಗಳು:

ಸ್ವೀಕರಿಸಬೇಕಾದ ಸರ್ಕಾರದ ವಂತಿಗೆ ರೂಪಾಯಿಗಳು

ವೆಲ್‌ಫೇರ್ ಕಮೀಷನರು

**ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು - 01. ಕಾ.ಸೂ. ಪಿ1**